||ಓಂ||

|| ಓಂ ಶಾರದಾ ಗುರುಭ್ಯೋ ನಮಃ ||

|| ಓಂ ಶ್ರೀ ರಾಮಚಂದ್ರ ಪರಬ್ರಹ್ಮಣೇ ನಮಃ ||

**ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇದಸೇ ।**
**ರಘುನಾಥಾಯ ನಾಥಾಯ ಸೀತಾಯ ಪತಯೇ ನಮಃ ||**

# ಶ್ರೀ ರಾಮಾಭ್ಯುದಯ ಸಭಾ ವಿನೋಬ ರಸ್ತೆ, ಶ್ರೀರಾಮಪೇಟೆ, ಮೈಸೂರು.

## ಈ ಸಭೆಯ ಇತಿಹಾಸ ಹಾಗೂ ಸಂಕ್ಷಿಪ್ತ ಪರಿಚಯ

[ ಲಭ್ಯವಿರುವ ದಾಖಲೆಗಳಿಂದ ಸಂಗ್ರಹಿಸಲ್ಪಟ್ಟಿದೆ ]

೧. ಪ್ರಾಚೀನಕಾಲ [ಉದಯಕಾಲ]

ಈ ರಾಮ ಮಂದಿರವು ಸುಮಾರು ಕ್ರಿ.ಶ. ೧೮೮೦ ರಲ್ಲಿ ಪೇಟೆಯ ಬ್ರಾಹ್ಮಣರಿಂದ ಶ್ರೀರಾಮದೇವರ ಪೂಜೆ, ರಾಮೋತ್ಸವದ ವೇಳೆ ಪಟ್ಟಾಭಿಷೇಕವನ್ನು ನಡೆಸುವ ಉದ್ದೇಶವನ್ನು ಹೊಂದಿ ಆರಂಭದಲ್ಲಿ ಒಬ್ಬೊಬ್ಬರ ಮನೆಯಲ್ಲಿ ಪ್ರತಿವರ್ಷವೂ ಸಾಮೂಹಿಕವಾಗಿ ರಾಮದೇವರ ಪಟವನ್ನಿಟ್ಟು ರಾಮೋತ್ಸವವನ್ನು ನಡೆಸುತ್ತಿದ್ದರೆಂದು ತಿಳಿದು ಬಂದಿದೆ. ಕ್ರಿ.ಶ. ೧೮೮೯ ರಲ್ಲಿ ಮಂದಿರಕ್ಕೆ ಸ್ವಂತ ಕಟ್ಟಡ ಅವಶ್ಯಕತೆಯನ್ನು ಮನಗಂಡು ಸಾರ್ವಜನಿಕರಲ್ಲಿ ಒಂದು ಮನವಿಯನ್ನು ಮಾಡಿಕೊಂಡರು.

ಈಗಿನ ಶ್ರೀರಾಮಪೇಟೆಯಲ್ಲಿರುವ ನಲ್ಲಪ್ಪಠಾಣಾ ಪೊಲೀಸ್ ಠಾಣೆಯ ಎದುರಿಗೆ ಒಂದು ಹಳೆಯ ಮನೆಯು ಇದ್ದುದನ್ನು ಕಂಡು ಅದರ ಮಾಲೀಕರಾದ ಶ್ರೀರಂಗಪಟ್ಟಣ ತಾಲ್ಲೂಕು, ಚೆಲುವೇ ಅರಸಿನ ಕೊಪ್ಪಲಿನ ಶ್ರೀಯುತರಾದ ಬೆಟ್ಟೇಗೌಡರನ್ನು ಕಂಡು ಅವರ ಅನುಮತಿಯ ಮೇರೆಗೆ ಅಲ್ಲಿ ರಾಮೋತ್ಸವವನ್ನು ಪೂರ್ವಿಕರು ನಡೆಸುತ್ತಿದ್ದರು.

೧೯೦೫ ರಲ್ಲಿದ್ದ ಕಾರ್ಯಕರ್ತರುಗಳು ಶ್ರದ್ಧಾಭಕ್ತಿಯಿಂದ ಪೂಜಾ ಕೈಂಕರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದರು. ಆ ಕಾಲದ ಪ್ರಮುಖ ಕಾರ್ಯಕರ್ತರ ಫೋಟೋವನ್ನು ಅನುಬಂಧ ೧ ರಲ್ಲಿ ನೋಡಬಹುದಾಗಿದೆ. ಈ ಕಾರ್ಯಕರ್ತರು ರಾಮಾಭ್ಯುದಯ ಸಭೆಯ ಮೂಲ ಸ್ಥಾಪಕರಾಗಿದ್ದಾರೆ ಹಾಗೂ ಶ್ರೀ ರಾಮಾಭ್ಯುದಯ ಸಭೆಯ ಇತಿಹಾಸದಲ್ಲಿ ಇವರು ಚಿರಸ್ಮರಣೀಯರೆನಿಸಿಕೊಂಡಿದ್ದಾರೆ.

ಈ ಪೇಟೆಗೆ ಶ್ರೀರಾಮಪೇಟೆ ಎಂಬ ಅಂಕಿತ ಬರಲು ಒಂದು ಬಲವಾದ ಕಾರಣವಿದೆ. ಈ ಪೇಟೆಯ ಸುತ್ತಮುತ್ತ ಒಟ್ಟು ನಾಲ್ಕು ರಾಮಮಂದಿರಗಳಿವೆ. ಅವುಗಳೆಂದರೆ, ೧. ಶ್ರೀ ರಾಮಾಭ್ಯುದಯ ಸಭಾ ೨. *ವಿಠಲರಾಯರ ರಾಮಮಂದಿರ* ೩. ಬಿಡಾರಂ ಕೃಷ್ಣಪ್ಪನವರ ರಾಮ ಮಂದಿರ ಮತ್ತು ಕಡೆಯದಾಗಿ ೪. ಅನಂತಪ್ಪನವರ ಅಗ್ರಹಾರದ ಪ್ರಸನ್ನ ರಾಮಮಂದಿರ.

ಈ ರಾಮಮಂದಿರಗಳ ಪ್ರಮುಖ ಕಾರ್ಯಕ್ರಮಗಳ ಅನ್ವರ್ಥವೆಂಬಂತೆ ವಿಠಲರಾಯ ರಾಮಮಂದಿರಕ್ಕೆ ಅಲಂಕಾರ ರಾಮನೆಂದೂ, ಬಿಡಾರಂ ಕೃಷ್ಣಪ್ಪನವರ ರಾಮಮಂದಿರಕ್ಕೆ ಸಂಗೀತ ರಾಮನೆಂದೂ, ರಾಮಾಭ್ಯುದಯ

ಸಭೆಯ ರಾಮ ಮಂದಿರಕ್ಕೆ **ಸಾಪಾಟ ರಾಮ** ನೆಂದೂ ಜನರು ಕರೆಯುತ್ತಿದ್ದರು.

ರಾಮಾಭ್ಯುದಯ ಸಭೆಯಲ್ಲಿ ಮುಖ್ಯವಾಗಿ ಪ್ರಸಾದ ವಿನಿಯೋಗ ಹಾಗೂ ಪಟ್ಟಾಭಿಷೇಕ ಮಹೋತ್ಸವದಲ್ಲಿ ಅನ್ನಸಂತರ್ಪಣೆಯು ಬಹು ಉತ್ಸಾಹದಿಂದ ನಡೆಯುತ್ತಿತ್ತು. ಈ ಕಾರಣದಿಂದಾಗಿ ಈ ರಾಮಮಂದಿರಕ್ಕೆ ಸಾಪಾಟ ರಾಮನೆಂಬ ಅನ್ವರ್ಥ ಬಂದಿದೆ.

ಉಳಿದಂತೆ ಬಿಡಾರಂ ಕೃಷ್ಣಪ್ಪನವರ ರಾಮಮಂದಿರದಲ್ಲಿ ಆಗಾಗ ಸಂಗೀತ ಕಛೇರಿಗಳು ನಡೆಯುತ್ತಿದ್ದುದರಿಂದ ಸಂಗೀತ ರಾಮನೆಂದು ಪ್ರಸಿದ್ಧಿ ಪಡೆದಿದೆ. ವಿಠಲರಾಯರಾಮ ಮಂದಿರದ ಬಿಳಿಶಿಲೆಯ ರಾಮದೇವರ ವಿಗ್ರಹವನ್ನು ವಿವಿಧ ಹೂಗಳಿಂದ ನಯನ ಮನೋಹರವಾಗಿ ಅಲಂಕರಿಸುತ್ತಿದ್ದುದರಿಂದ ಅಲಂಕಾರ ರಾಮನೆಂದು ಅನ್ವರ್ಥವನ್ನು ಹೊಂದಿದೆ.

ಈ ನಾಲ್ಕೂ ರಾಮಮಂದಿರಗಳಲ್ಲಿ ಶ್ರೀ ರಾಮಾಭ್ಯುದಯ ಸಭಾ ಹಾಗೂ ಅನಂತಪ್ಪನವರ ಅಗ್ರಹಾರದ ಪ್ರಸನ್ನ ಸೀತಾರಾಮಮಂದಿರ ಪ್ರಾಚೀನವಾದವುಗಳು ಎಂದು ತಿಳಿದು ಬಂದಿದೆ.

ಸುಮಾರು ಒಂದುನೂರ ಹದಿನೈದು ವರ್ಷಗಳ ಹಿಂದೆ ಶ್ರೀರಾಮದೇವರ ತೈಲಚಿತ್ರವನ್ನು (ಸಿಲ್ಕ್‌ಬಟ್ಟೆಯಲ್ಲಿ ಬಿಡಿಸಿರುವುದು ವಿಶೇಷ) ಮಂದಿರದಲ್ಲಿ ಪೂಜಿಸಲಾಗುತ್ತಿತ್ತು. ಅದೇ ಚಿತ್ರವನ್ನು ಇಂದೂ ಸಹ ಪೂಜಿಸಲಾಗುತ್ತಿದೆ. ಈ ತೈಲಚಿತ್ರದ ವಿಶೇಷವೆಂದರೆ ಸಾಮಾನ್ಯವಾಗಿ ಶ್ರೀರಾಮದೇವರ ಬಲಭಾಗದಲ್ಲಿ ಲಕ್ಷ್ಮಣ, ಎಡಭಾಗದಲ್ಲಿ ಸೀತಾಮಾತೆ ಹಾಗೂ ರಾಮದೇವರ ಪಾದದ ಬಳಿ ಹನುಮಂತ ಇರುವುದನ್ನು ಕಾಣಸಿಗುತ್ತಿದೆ. ಆದರೆ ಈ ತೈಲಚಿತ್ರದಲ್ಲಿ ಸೀತಾಮಾತೆ ಶ್ರೀ ರಾಮಚಂದ್ರನ ಬಲಭಾಗದಲ್ಲಿ ನಿಂತು, ನಿಂತ ಭಂಗಿಯಲ್ಲಿರುವ ಹನುಮಂತನನ್ನು ಶ್ರೀ ರಾಮಚಂದ್ರಸ್ವಾಮಿಯ ಯೋಗದೃಷ್ಟಿಗೆ ಒಳಪಡಿಸಿ ಬಲಗೈಯಲ್ಲಿ ಕಮಲಪುಷ್ಪವನ್ನು ಹಿಡಿದುಕೊಂಡಿದ್ದು, ಲಕ್ಷ್ಮಣನು ಶ್ರೀ ರಾಮಚಂದ್ರಸ್ವಾಮಿಯ ಎಡಭಾಗಕ್ಕೆ ಇರುವುದು ಚಿತ್ರಿಸಿರುವುದು ವಿಶೇಷವಾಗಿದೆ. ಇದರ ಬಗ್ಗೆ ಮಾಹಿತಿ ಸಂಗ್ರಹಿಸಲು ಪ್ರಯತ್ನಿಸಿದಾಗ ತಿಳಿದು ಬಂದ ವಿಷಯವೇನೆಂದರೆ, ಇದು ದ್ರಾವಿಡ ಸಂಪ್ರದಾಯದ ಪ್ರತೀಕವೆಂದು, ಇಲ್ಲಿ ಪ್ರಮುಖವಾಗಿ **ಆಚಾರ್ಯೋಪಾಸನೆಗೆ** ಹೆಚ್ಚು ಒತ್ತು ನೀಡಿ ಈ ತೈಲ ಚಿತ್ರವನ್ನು ಬಿಡಸಲಾಗಿದೆ ಎಂಬುದಾಗಿ ತಿಳಿದು ಬಂದಿದೆ. ಈ ಚಿತ್ರವನ್ನು ಅರಮನೆ ಚಿತ್ರಕಾರರು ಬಿಡಿಸಿರುವ ಬಗ್ಗೆ ಸಾಕಷ್ಟು ಪುರಾವೆಗಳಿವೆ. ಇಂತಹುದೇ ತೈಲಚಿತ್ರ ಸುಮಾರು ಒಬ್ಬ ಮನುಷ್ಯನ ಎತ್ತರದ್ದು ಸಹಾ ನೋಡಲು ಲಭ್ಯವಿದೆ.(ಅಗ್ರಹಾರದ ಶ್ರೀ ಶಂಕರ ನಾರಾಯಣಶಾಸ್ತ್ರಿಗಳ ಮನೆಯಲ್ಲಿದೆ.)

೧೯೦೭-೦೮ ರ ಅವಧಿಯಲ್ಲಿ ಶ್ರೀ ರಾಮದೇವರು ಪೂಜೆಗೊಳ್ಳುತ್ತಿರುವ ಸ್ಥಳವನ್ನು ಧಾನ ಮಾಡುವ ಅಭಿಪ್ರಾಯವನ್ನು ಶ್ರೀಯುತ ಬೆಟ್ಟೇಗೌಡರು ವ್ಯಕ್ತಪಡಿಸಿದ್ದರು ಎಂಬುದು ದಾಖಲೆಗಳಿಂದ ತಿಳಿದು ಬಂದಿದೆ.

೧೯೨೦ರ ಸಭೆಯ ಮೀಟಿಂಗ್ ನಡಾವಳಿಯಲ್ಲಿ ಸುಬ್ಬಾಜೋಯ್ಸ್ ಉರುಫ್ ಮ.ರಾ.ಪುಟ್ಟಾಜೋಯ್ಸ್‌ರವರಿಂದ ಧರ್ಮಾರ್ಥವಾಗಿ ಬಂದ ಕೋದಂಡರಾಮ ಪಠವನ್ನು ರಿಪೇರಿ ಮಾಡಿಸಿ ಕಟ್ಟುಹಾಕಿಸಲಾಗಿದೆ. (ಪಿಳ್ಳಂಭಟ್ಟರು)

ಇದೇ ಅವಧಿಯಲ್ಲಿ ಶ್ರೀ ಕೋದಂಡರಾಮರ ಪಠವನ್ನು ಹೊಸದಾಗಿ ಬರೆಸಲಾಗಿದೆ ಎಂದು ತಿಳಿದು ಬಂದಿದೆ.

ದಿನಾಂಕ ೨೭.೦೩.೧೯೨೧ರ ನಡಾವಳಿಯಲ್ಲಿ ಶ್ರೀ ರಾಮಮಂದಿರವನ್ನು ಸ್ಥಿರಪಡಿಸುವ ವಿಚಾರದಲ್ಲಿ ಬೇರ್ಪಡಿಸಿರುವ ಒಂದು ನೋಟೀಸು ದೊರೆತಿದ್ದು, ಅದನ್ನು ಹೊಂದಿಸಿ ನೋಡಿದಾಗ ದಾನಪತ್ರದ ನಕಲೆಂದು ಖಚಿತವಾದಾಗ, ಈ ವಿಚಾರದಲ್ಲಿ ದಿನಾಂಕ ೦೪.೦೪.೧೯೨೧ ನೇ ಸೋಮವಾರದ ದಿವಸ ೬ ಜನಕ್ಕೆ ಕಡಿಮೆಯಿಲ್ಲದಂತೆ ಸಭಾಸದಸ್ಯರು ಚೆಲುವೇ ಅರಸಿನ ಕೊಪ್ಪಲಿಗೆ ಹೋಗಿ ಧರ್ಮಕರ್ತರೊಡನೆ ವಿಚಾರಮಾಡಿದಾಗ **ಶ್ರೀಯುತ ಬೆಟ್ಟೇಗೌಡರ ಮಕ್ಕಳಾದ ಶ್ರೀಯುತ ಬಿ. ಚೆಲುವಯ್ಯನವರು** ಶ್ರೀ ರಾಮಮಂದಿರಕ್ಕೆ ದಾನಪತ್ರವನ್ನು ಬರೆದುಕೊಟ್ಟಿರುತ್ತಾರೆ. ಇವರು ದಾನಪತ್ರವನ್ನು ಬರೆದುಕೊಡುವುದರ ಮೂಲಕ ತಮ್ಮ ತಂದೆಯವರ ಆಕಾಂಕ್ಷೆಯನ್ನು ನೆರವೇರಿಸಿದ ತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ದಾನಪತ್ರದ ಸಂಖ್ಯೆ ೪೫೫೫, ವಾಲ್ಯೂಂ ೫, ಪುಟ ೫೦-೫೫, ದಾನಪತ್ರದ ದಿನಾಂಕ ೧೯.೦೬.೧೯೨೧ ಆಗಿದ್ದು ಇವರ **ಭಾವಚಿತ್ರವನ್ನು** ಪುಸ್ತಕದ ಆರಂಭಲ್ಲೇ ನೀಡಲಾಗಿದೆ.

ಈ ವಿಚಾರದಲ್ಲಿ ಶ್ರೀಯುತ ಚೆಲುವಯ್ಯನವರ ಮಗಳು ಶ್ರೀಮತಿ ಕೃಷ್ಣವೇಣಿಯವರು ತಿಳಿಸುವಂತೆ ಈ ಮನೆ ಹತ್ತೂಜನಗಳ ಮನೆಯಾಗಬೇಕೆಂಬುದೇ ಅವರ ತಾತನವರ ಅಪೇಕ್ಷೆಯಾಗಿತ್ತು ಅವರು ಆಗಾಗ್ಗೆ ಈ ವಿಷಯವನ್ನು ಹೇಳುತ್ತಿದ್ದರು ಎಂದು ಜ್ಞಾಪಿಸಿಕೊಳ್ಳುತ್ತಾರೆ. ಅದರಂತೆ ತಮ್ಮ ತಂದೆಯವರ ವಚನವನ್ನು ಶ್ರೀಯುತ ಚೆಲುವಯ್ಯನವರು ಪಾಲಿಸಿರುತ್ತಾರೆಂದು ಸಂತಸ ಪಟ್ಟಿದ್ದಾರೆ. ಈ ಕಾರಣದಿಂದಾಗಿ ಅವರ ಜ್ಞಾಪಕಾರ್ಥವಾಗಿ ಅಂದಿನಿಂದ ಇಂದಿನವರೆಗೆ ಅವರ ವಂಶದವರ ಶ್ರೇಯಃ ಪ್ರಾರ್ಥನೆಯನ್ನು ಕೋರಿ ಪ್ರತಿವರ್ಷವೂ ಯುಗಾದಿ ದಿನದಂದು ಶ್ರೀಮದೇವರಿಗೆ ಪೂಜೆಯನ್ನು ಸಲ್ಲಿಸಲಾಗುತ್ತಿದೆ.

ಈ ಅವಧಿಯಲ್ಲಿ ಸದಸ್ಯರಾಗಿದ್ದ **ಅವತಿ ರಾಮಯ್ಯನವರು** (ದಳ್ಳಾಳಿ ಕಿತ್ತಲೆ ಹಣ್ಣಿನ ರಾಮಣ್ಣನವರು) ಸಭೆಯ ಎಲ್ಲಾ ಜವಾಬ್ದಾರಿಯನ್ನು ಏಕಾಂಗಿಯಾಗಿ ಯಶಸ್ವಿಯಾಗಿ ನಿರ್ವಹಿಸುತ್ತಾ ಆಡಳಿತ ಹಾಗೂ ಲೆಕ್ಕಪತ್ರಗಳನ್ನು ನೋಡಿಕೊಳ್ಳುತ್ತಿದ್ದರು. ಇವರ ಅಪಾರ ಶ್ರದ್ಧೆ, ಜವಾಬ್ದಾರಿಗಳಲ್ಲಿ ಮಂದಿರವು ಸುವ್ಯವಸ್ಥಿತವಾಗಿ ನಡೆದು ಅಭಿವೃದ್ಧಿ ಹೊಂದಿತು. ಇವರು ಶ್ರೀ ರಾಮಮಂದಿರದ ಇತಿಹಾಸದಲ್ಲೇ ನಮ್ಮೆಲ್ಲರಿಗೂ ಪ್ರಾತಃಸ್ಮರಣೀಯರು ಎಂದರೆ ತಪ್ಪಾಗಲಾರದು. ಇವರ ಕಾಲದಲ್ಲೇ ಶ್ರೀ ರಾಮಮಂದಿರಕ್ಕೆ ಶ್ರೀ ರಾಮಾಭ್ಯುದಯ ಸಭಾ ಎಂದು ನಾಮಕರಣವಾಯಿತು. ಇದೇ ವೇಳೆಯಲ್ಲಿ ಮಂದಿರಕ್ಕೆ ಹೆಂಚುಕೂಡಿಸಿ ರಿಪೇರಿ ಮಾಡಲಾಗಿದೆ.

ದಿನಾಂಕ ೦೩.೦೬.೧೯೨೪ ರ ಮೀಟಿಂಗ್ ನಡಾವಳಿಯಲ್ಲಿ ಶ್ರೀ ರಾಮಮಂದಿರವನ್ನು ಅಭಿವೃದ್ಧಿಪಡಿಸುವ ಸದುದ್ದೇಶವನ್ನು ಹೊಂದಿ, ಮಂದಿರವನ್ನು ಹೊಸದಾಗಿ ಕಟ್ಟಲು ನಿರ್ಧರಿಸಿ ಕಾರ್ಯಕಾರಿ ಸಮಿತಿ ರಚನೆಯಾಯಿತು. ಈ ಕಾರ್ಯಕಾರಿ ಸಮಿತಿಗೆ ಶ್ರೀ ಎಂ.ಎನ್. ರಾಮರಾಯರನ್ನು ಅಧ್ಯಕ್ಷರನ್ನಾಗಿ ಅಡ್ವೋಕೇಟ್ ಶ್ರೀ ವಿ.ಲಿಂಗಪ್ಪಯ್ಯನವರನ್ನು ಉಪಾಧ್ಯಕ್ಷರನ್ನಾಗಿ, ಶ್ರೀ ವಿ.ಎನ್. ಶ್ರೀಕಂಠಯ್ಯ ಮತ್ತು ಲಕ್ಷ್ಮೀನಾರಣಪ್ಪ ಉರುಫ್ ಪೂರ್ಣಮೂರ್ತಿಗಳನ್ನು ಕಾರ್ಯದರ್ಶಿಗಳನ್ನಾಗಿಯೂ ಹಾಗೂ ಡಿ. ವೆಂಕಟನಂಜಪ್ಪನವರನ್ನು ಖಜಾಂಚಿಯನ್ನಾಗಿಯೂ ನೇಮಕ ಮಾಡಿ ಅವರ ಸೇವೆಯನ್ನು ಸಭೆಗೆ ಪಡೆಯಲಾಯಿತು.

ವಿಶೇಷವೇನೆಂದರೆ, ಆಗಿನ ಸದಸ್ಯರ ಪೈಕಿ ಶೇಕಡ ೬೦ ರಷ್ಟು ಜನ ಉಲುಚುಕೆಮ್ಮೆ ಪಂಗಡವರೇ ಪ್ರಮುಖರಾಗಿದ್ದರು. ಶ್ರೀ ರಾಮೋತ್ಸವದ ಆಹ್ವಾನ ಪತ್ರಿಕೆಯನ್ನು ಎಲ್ಲರಿಗೂ ಹಂಚಲಾಗುತ್ತಿತ್ತು. ಆಗ ಮುದ್ರಿತವಾಗುತ್ತಿದ್ದ ಕರಪತ್ರವನ್ನು ಓದುಗರ ಅವಗಾಹನೆಗಾಗಿ **ಅನುಬಂಧ ೨** ರಲ್ಲಿ ನೀಡಲಾಗಿದೆ.

ದಿನಾಂಕ ೨೮.೧೧.೧೯೨೭ರ ಮೀಟಿಂಗ್ ನಡಾವಳಿಯಲ್ಲಿ ಶ್ರೀರಾಮಪೇಟೆಯಲ್ಲಿನ ಶ್ರೀ ರಾಮಾಭ್ಯುದಯ ಸಭಾ ರಾಮಮಂದಿರವನ್ನು ೬,೦೦೦.೦೦ ರೂಪಾಯಿಗಳ ವೆಚ್ಚದಲ್ಲಿ ಜೀರ್ಣೋದ್ಧಾರ ಕಾರ್ಯಕೈಗೊಂಡು ಮಂದಿರವನ್ನು ಹೊಸದಾಗಿ ನಿರ್ಮಾಣ ಮಾಡಲು ತೀರ್ಮಾನ ಕೈಗೊಳ್ಳಲಾಯಿತು. ಇದಕ್ಕೆ ತಗಲುವ ವೆಚ್ಚವನ್ನು ಮಂದಿರದ ಲಭ್ಯವಿರುವ ಫಂಡ್‌ನಿಂದ ಉಪಯೋಗಿಸಿಕೊಳ್ಳುವುದೇ ಅಲ್ಲದೆ, ಸಭಾ ಮೆಂಬರುಗಳು ೨೫ ರೂಪಾಯಿ ಚಂದಾ ಕೊಡತಕ್ಕದ್ದೆಂದೂ, ಒಟ್ಟು ವೊಬಲಗು ೧೫೦೦ ರೂಪಾಯಿಗಳು ಮುಟ್ಟಿದ ತಕ್ಷಣ ಕೆಲಸ ಪ್ರಾರಂಭಮಾಡುವುದೆಂದು ಸಭೆ ತೀರ್ಮಾನಿಸಿ ಒಂದು ನಿರ್ಧಾರಕ್ಕೆ ಬಂದಿತು.

೧೯೨೭ರ ಜನವರಿಯಿಂದ ಚಂದಾ ಮತ್ತು ಡೊನೇಷನ್ ಸಂಗ್ರಹಣೆ ಕಾರ್ಯ ಪ್ರಾರಂಭವಾಗಿ ಅವುಗಳಿಗೆ ರಸೀದಿಯನ್ನು ಕೊಡಲಾಗುತ್ತಿತ್ತು. ಈ ರೀತಿ ಸಾರ್ವಜನಿಕರಿಂದ ಚಂದಾವಸೂಲಿ ಪ್ರಾರಂಭವಾಯಿತು. ಎಲ್ಲಾ ಸದಸ್ಯರೂ ಸಕ್ರಿಯವಾಗಿ ಹಣ ಸಂಗ್ರಹಣೆ ಕಾರ್ಯದಲ್ಲಿ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು.

ಆಗಿನ ಕಾಲದಲ್ಲಿ ಶ್ರೀ ರಾಮಪಟ್ಟಾಭಿಷೇಕದ ನಂತರ ನಡೆಯುವ ಹನುಮಂತೋತ್ಸವಕ್ಕೆ ಅರಮನೆಯಿಂದ ಬಾಜಾಬಜಂತ್ರಿ ಮತ್ತು ಪೊಲೀಸ್ ಗೌರವಗಳನ್ನು ಕರೆಸುತ್ತಿದ್ದರು. ಅಲ್ಲದೆ ಸಮಾರಾಧನೆಗೆ ಅಗತ್ಯವಿದ್ದ ಪಾತ್ರೆಗಳನ್ನು ಸಹ ಅರಮನೆಯಿಂದಲೇ ಒದಗಿಸುತ್ತಿದ್ದರು. **<u>ಅನುಬಂಧ ೩</u>** ರಲ್ಲಿ ಈ ಬಗ್ಗೆ ಲಭ್ಯವಿರುವ ದಾಖಲೆಯನ್ನು ನೀಡಲಾಗಿದೆ.

ಶೃಂಗೇರಿ ಸಂಸ್ಥಾನದ ಸ್ವಾಮಿಗಳು ಮೈಸೂರಿಗೆ ಬಂದಾಗಲೆಲ್ಲಾ ಈ ರಾಮಮಂದಿರಕ್ಕೆ ಭೇಟಿ ನೀಡುವ ಪದ್ದತಿಯನ್ನು ಇಟ್ಟುಕೊಂಡಿದ್ದರು. ಹೊರದೇಶಗಳಲ್ಲಿ ಚಾತುರ್ಮಾಸ ವ್ರತ ನಡೆಯುತ್ತಿದ್ದಾಗಲೆಲ್ಲಾ ಪೂಜಾ ಪ್ರಸಾದಗಳನ್ನು ಮಂದಿರಕ್ಕೆ ತಪ್ಪದೇ ಕಳುಹಿಸುವ ಪದ್ಧತಿಯಿತ್ತು.

ದಿನಾಂಕ ೫.೫.೧೯೨೮ರ ಮೀಟಿಂಗ್ ನಡಾವಳಿಯಲ್ಲಿ ತಿಳಿಸಿರುವಂತೆ ಕಟ್ಟಡದ ಜೀರ್ಣೋದ್ಧಾರಕ್ಕೆ ಅವಶ್ಯಕವಾಗಿದ್ದ ಲೈಸೆನ್ಸ್‌ನ್ನು ಸಹಾ ಸಭೆಯವರು ಹೊಂದಿರುತ್ತಾರೆ. ದಿನಾಂಕ ೬.೫.೧೯೨೮ನೇ ಭಾನುವಾರದ ದಿವಸ ಮಂದಿರದಲ್ಲಿರತಕ್ಕ ಶ್ರೀರಾಮದೇವರ ಫೋಟೋ ವಗೈರೆಗಳನ್ನು ಬೇರೆಡೆಗೆ ಸ್ಥಳಾಂತರಿಸಿ ಅನುಕೂಲವಾಗಿರುವ ಸ್ಥಳದಲ್ಲಿರಿಸಿ, ದಿನಾಂಕ ೧೭.೦೫.೧೯೨೮ನೇ ಗುರುವಾರದಂದು ಮಂದಿರದ ಹೊಸ ಕಟ್ಟಡದ ಕೆಲಸ ಪ್ರಾರಂಭಮಾಡಲಾಯಿತು.

ಕಟ್ಟಡ ನಿರ್ಮಾಣಗೊಳ್ಳುವವರೆವಿಗೆ ಶ್ರೀ ರಾಮನವಮಿ ಉತ್ಸವವನ್ನು ಮೋತಿಖಾನೆ ಸುಬ್ಬರಾಯರ ಮನೆಯಲ್ಲಿ ನೆರವೇರಿಸಲು ಸಭಾ ಸದಸ್ಯರು ತೀರ್ಮಾನಿಸಿ ಅದರಂತೆ ನಡೆಸಿರುತ್ತಾರೆ. ಸದರಿ ಮಂದಿರದ ನಿರ್ಮಾಣ ಕೆಲಸವನ್ನು ಕಂಟ್ರಾಕ್ಟರ್ **<u>ತಿರುವೆಂಕಟಮೊದಲಿಯಾರ್‌ರವರಿಗೆ</u>** ವಹಿಸಿಕೊಡಲಾಯಿತು.

೧೯೩೧ರಲ್ಲಿ ಶ್ರೀ ಶೃಂಗೇರಿ ಸಂಸ್ಥಾನದ ಪೀಠಾದಿಪತಿಗಳಾದ ಶ್ರೀ ವಿದ್ಯಾ ಅಭಿನವ ತೀರ್ಥ ಸ್ವಾಮಿಗಳ ನಿಧನಕ್ಕೆ ಮಂದಿರದಿಂದ ಸಂತಾಪ ಸೂಚನೆಯನ್ನು ಕಳುಹಿಸಲಾಯಿತು.

೧೯೩೪ರ ಜನವರಿ ಮಹೆಯಲ್ಲಿ **<u>ರಾಜಕಾರ್ಯ ಪ್ರಸಕ್ತ ದಿವನ್ ಬಹದ್ದೂರ್ ಎಂ.ಎನ್.ಕೃಷ್ಣರಾಯರು</u>** ಮಂದಿರಕ್ಕೆ ದಯಮಾಡಿಸಿ ೧೦೦ ರೂ.ಗಳ ಚೆಕ್ ನೀಡಿರುತ್ತಾರೆ. ಇದಕ್ಕೆ ಸಭೆಯು ಧನ್ಯವಾದಗಳನ್ನು ಅರ್ಪಿಸಿದೆ.

ಇವರು ಹಿರಣ್ಣಯ್ಯನವರ ಸಹೋದರರಾಗಿರುತ್ತಾರೆ. ಈ ವೇಳೆಗೆ ಕಟ್ಟಡದ ನಿರ್ಮಾಣ ಕಾರ್ಯ ಪೂರ್ಣಗೊಂಡಿತ್ತು.

೧೯೩೫ರ ಅವಧಿಯಲ್ಲಿ **ಉತ್ಸವಮೂರ್ತಿಯನ್ನು ಭಾರದ್ವಾಜ ಕೃಷ್ಣಪ್ಪನವರ ಕುಟುಂಬ ಭಾರದ್ವಾಜ ಗುಂಡಮ್ಮನವರು** ಮಾಡಿಸಿಕೊಟ್ಟಿರುವುದು ದಾಖಲೆಗಳಿಂದ ತಿಳಿದು ಬಂದಿದೆ.

೨. ಮಧ್ಯಕಾಲ

೧೯೩೮ರ ಮಾರ್ಚಿ ತಿಂಗಳಲ್ಲಿ ನಡೆದ ಸಭೆಯಲ್ಲಿ ಮಂದಿರದ ಸದಸ್ಯರೇ ಆಗಲೀ ಅಥವಾ ಸದಸ್ಯರಿಂದ ಶಿಫಾರಸ್ಸು ಮಾಡಲ್ಪಡುವ ಇತರೇ ಯಾರೇ ಆಗಲಿ ತಮ್ಮ ಮನೆಯಲ್ಲಿ ನಡೆಯಬಹುದಾದ ಹೆಚ್ಚಿನ ಕಾರ್ಯಗಳಿಗಾಗಿ ಅಪೇಕ್ಷೆಪಟ್ಟಲ್ಲಿ ಮಂದಿರಕ್ಕೆ ಸೇರಿದ ಪಾತ್ರೆಗಳನ್ನು ಸಭೆಪರವಾಗಿ ಮ.ರಾ.ಅವತಿ ರಾಮಣ್ಣನವರು ಮತ್ತು ವೇಃ ಲಕ್ಷ್ಮೀನಾರಣಪ್ಪ ಉರುಫ್ ಪೂರ್ಣಮೂರ್ತಿಗಳವರಿಂದ ಬಾಡಿಗೆ ನೀಡಿ ತೆಗೆದುಕೊಂಡು ಹೋಗಲು ತೀರ್ಮಾನಿಸಿತು. ಇದರಿಂದ ಮಂದಿರದ ಆದಾಯವನ್ನು ಹೆಚ್ಚಿಸುವುದು ಮುಖ್ಯ ಉದ್ದೇಶವಾಗಿತ್ತು. ಹೀಗಾಗಿ ಪಾತ್ರೆಗಳನ್ನು ಬಾಡಿಗೆಗೆ ನೀಡುವ ಪದ್ದತಿ ಜಾರಿಗೆ ಬಂತು.

೧೯೪೦ರ ರಾಮಾಭ್ಯುದಯ ಸಭಾ ಸದಸ್ಯರ ಫೋಟೋವನ್ನು **ಅನುಬಂಧ** ೪ ರಲ್ಲಿ ನೀಡಲಾಗಿದೆ.

೧೯೪೦ರ ಜನವರಿ ೧೪ ರಂದು ನಡೆದ ಸಾಮಾನ್ಯಸಭೆಯಲ್ಲಿ ಲೋನ್‌ಬಾಂಡ್‌ಗಳ ಅವಧಿ ಪೂರ್ಣಗೊಳ್ಳುವುದರಿಂದ, ಇನ್ನು ಮುಂದೆ ಅದನ್ನು ಬಡ್ಡಿಗೆ ಬಿಡುವ ಬದಲಾಗಿ ಅದರಿಂದ ಮಂದಿರಕ್ಕೆ ಆದಾಯ ತರುವಂತಹ ಭೂಸ್ಥಿರ ಆಸ್ತಿಯನ್ನು ಖರೀದಿಸಲು ತೀರ್ಮಾನಿಸಲಾಗಿದೆ.

೨೮.೦೧.೧೯೪೦ರಲ್ಲಿ ಶ್ರೀರಾಮಪೇಟೆಯಲ್ಲಿದ್ದ ೧೫೦೩ನೇ ನಂಬರ್ ಮನೆಯನ್ನು ಶ್ರೀರಾಮದೇವರ ಹೆಸರಿನಲ್ಲಿ ತೆಗೆದುಕೊಂಡು ಭೂಸ್ಥಿರಾಸ್ತಿಯನ್ನು ಮಾಡುವ ಯೋಜನೆ ಹಾಕಿಕೊಂಡು, ಸುಮಾರು ೮೦೦ ರೂಪಾಯಿಗಳಿಗೆ ದಿನಾಂಕ ೨೦.೧೨.೧೯೪೦ ರಂದು ಕ್ರಯಪತ್ರ ರಿಜಿಸ್ಟ್ರೇಷನ್ ನಂ. ೨೯೧೫, ವಾಲ್ಯೂಂ ೧೨೭೨, ಪುಸ್ತಕ ನಂ.೧, ಪುಟ ಸಂಖ್ಯೆ ೨೪೦-೨೪೩ರ ಮೂಲಕ ಕ್ರಯದ ಸ್ವತ್ತನ್ನು ಸ್ವಾಧೀನಕ್ಕೆ ಮಂದಿರದವರು ತೆಗೆದುಕೊಂಡಿರುತ್ತಾರೆ. ಇದಕ್ಕೆ ತಗುಲಿದ ವೆಚ್ಚವನ್ನು ಮಂದಿರದ ಲೋನ್‌ಬಾಂಡ್‌ನಿಂದ ಬಡ್ಡಿಯೊಡನೆ ಬಂದ ರೂ. ೭೭೩-೭-೦೭ ಹಣವನ್ನು ಉಪಯೋಗಿಸಿ ಕ್ರಯಕ್ಕೆ ಪಡೆಯಲಾಗಿದೆ. ಇದೇ ಅವದಿಯಲ್ಲಿ ಮ.ರಾ.ವಿ.ಎಸ್. ಶ್ರೀಕಂಠಯ್ಯನವರು ತಮ್ಮ ಹೆಸರಿನಲ್ಲಿದ್ದ ಮೈಸೂರು ಕೋ ಆಪರೇಟೀವ್ ಸೊಸೈಟಿ ಲಿಮಿಟೆಡ್‌ನ ೧೫೦ ರೂಪಾಯಿ ಬೆಲೆಬಾಳುವ ೧೫ಷೇರುಗಳನ್ನು ಶ್ರೀರಾಮದೇವರ ಹೆಸರಿಗೆ ನಾಮನಿರ್ದೇಶನ ಮಾಡಿರುವುದಾಗಿಯೂ ಇದಕ್ಕೆ ಸಭೆಯು ಅವರ ಸದುದ್ದೇಶಕ್ಕೆ ತನ್ನ ಕೃತಜ್ಞತೆಯನ್ನು ಸಲ್ಲಿಸಿದೆ. ಈ ಹಣದಿಂದ ತಾವು ರಾಮದೇವರ ಸೇವೆಯನ್ನು ನಡೆಸಿಕೊಂಡು ಬಂದದ್ದಲ್ಲದೆ ತಮ್ಮ ನಂತರ ಸಭಾ ಕಮಿಟಿಯವರು ಶಾಶ್ವತವಾಗಿ ಶ್ರೀ ರಾಮದೇವರ ಕಾರ್ಯವನ್ನು ನೆರವೇರಿಸಲು ಸಹಾಯ ಮಾಡಿರುತ್ತಾರೆ. ಇವರ ಈ ನಿರ್ಧಾರ ಅಭಿನಂದನೀಯವಾದುದು.

ಸದರಿ ಮೇಲ್ಕಂಡ ೧೫೦೩ನೇ ನಂಬರ್ ಮನೆಯು ಮೂಲತಃ ಅಯ್ಯಣ್ಣಶಾಸ್ತ್ರಿಗಳಿಗೆ ಸೇರಿದ್ದು ಹಣಕಾಸಿನ ಮುಗ್ಗಟ್ಟಿನಿಂದಾಗಿ ಭೋಗ್ಯಕ್ಕೆ ಹಾಕಿದ್ದು, ಅದಕ್ಕೆ ವಾರಸುದಾರರೇ ಇಲ್ಲದೇ ಹೋದಾಗ, ಶ್ರೀ ಸೋಮಸುಂದರಂ ಮತ್ತು ಎಂ.ಆರ್.ನರಸಿಂಹಮೂರ್ತಿಯವರಿಂದ ಶುದ್ಧಕ್ರಯಪತ್ರ ಬರೆಸಿಕೊಂಡು ಈ ಸ್ವತ್ತನ್ನು ಕ್ರಯಕ್ಕೆ ಪಡೆಯಲಾಗಿದೆ. ರೂ. ೫೦ ಖರ್ಚು ಮಾಡಿ ಶಿಥಿಲವಾಗಿದ್ದ ಕಟ್ಟಡವನ್ನು ರಿಪೇರಿ ಮಾಡಿಸಲಾಗಿದೆ.

ಇದೇ ಅವಧಿಯಲ್ಲಿ ಕಮಿಟಿಯಲ್ಲಿ ಬಹುಕಾಲದಿಂದ ಮೆಂಬರಾಗಿ ಶ್ರೀರಾಮಸೇವೆಯನ್ನು ಮಾಡುತ್ತಿದ್ದ ಅವತಿ ರಾಮಶೇಷಯ್ಯನವರು ಮತ್ತು ಕಾರ್ಯದರ್ಶಿಗಳಾದ ಲಕ್ಷ್ಮೀನಾರಣಪ್ಪ ಉರುಫ್ ಪೂರ್ಣಮೂರ್ತಿಗಳು ಸ್ವರ್ಗಸ್ಥರಾದರು. ಇವರಿಗೆ ಸಭೆ ಸಂತಾಪ ಸೂಚನೆಯನ್ನು ಕಳುಹಿಸಿದೆ.

೧೯೪೧ರಲ್ಲಿ ಶ್ರೀ ವಿ.ಲಿಂಗಪ್ಪಯ್ಯನವರು ಅಧ್ಯಕ್ಷರಾಗಿಯೂ ಮತ್ತು ಶ್ರೀ ವಿ.ಎಸ್.ಶ್ರೀಕಂಠಯ್ಯನವರು ಗೌರವ ಕಾರ್ಯದರ್ಶಿಗಳಾಗಿಯೂ ಅಧಿಕಾರ ವಹಿಸಿಕೊಂಡರು. ಇವರ ಕಾಲದಲ್ಲೇ ಮಂದಿರಕ್ಕೆ ಮತ್ತಷ್ಟು ಆಸ್ತಿಗಳನ್ನು ಸೇರಿಸಿಕೊಳ್ಳಲಾಯಿತು. ಕಾರ್ಯದರ್ಶಿಯವರಾದ ಶ್ರೀ ಭಾಸ್ಕರಪ್ಪನವರು ಮತ್ತು ಶ್ರೀ ಸಿ.ಎಸ್. ನಾರಾಯಣರಾಯರ ಶ್ರಮದ ಫಲವಾಗಿ ಈ ಸ್ವತ್ತುಗಳು ಮಂದಿರಕ್ಕೆ ಲಭಿಸಿದೆ.

ದಿನಾಂಕ ೮.೩.೧೯೪೨ರಲ್ಲಿ ನಡೆದ ಮೀಟಿಂಗ್ ನಡವಳಿಕೆಯಲ್ಲಿ ಮಂದಿರದ ಪೂರ್ವ ಭಾಗದಲ್ಲಿ ಚಾಮುಂಡೇಶ್ವರಿ ರಸ್ತೆ ( ಈಗಿನ ನಾರಾಯಣಶಾಸ್ತ್ರಿ ರಸ್ತೆ) ಯಲ್ಲಿದ್ದ ೧೩೬೨ನೇ ಡೋರು ನಂಬರುವುಳ್ಳ ಮನೆಯ ಅಕ್ವಿಷನ್ ವಿಚಾರದಲ್ಲಿ ಟ್ರಸ್ಟ್‌ಬೋರ್ಡ್ ಛೇರ್ಮನ್‌ರವರಿಂದ ಸುಮಾರು ೯೦೦.೦೦ ರೂಪಾಯಿಗಳನ್ನು ಡಿಪಾಜಿಟ್ ಮಾಡಬೇಕೆಂದು ವಗೈರೆ ನಮೂದಿಸಿ ಬಂದಿದ್ದ ೨೮೪೬ : ೨೬.೦೨.೧೯೪೨ರ ಮೆಮೋವನ್ನು ಪರಿಶೀಲಿಸಿ ಮಂದಿರಕ್ಕೆ ಪಡೆಯಲು ನಿರ್ಧರಿಸಲಾಯಿತು. ಇದಕ್ಕೆ ಮಂದಿರದ ಫಂಡ್‌ನಿಂದ ೩೪೦.೦೦ ರೂಪಾಯಿಗಳನ್ನು ಉಳಿಕೆ ೫೬೦.೦೦ ರೂಪಾಯಿಗಳನ್ನು ಮ.ರಾ.ಎಂ.ವಿ.ನಾರಾಯಣರಾಯರು ೩ ತಿಂಗಳವರೆಗೆ ಬಡ್ಡಿಯಿಲ್ಲದೆ ಹಣ ಕೊಟ್ಟಿದ್ದು ಈ ಹಣದಿಂದ ಮೇಲ್ಕಂಡ ಮನೆಯನ್ನು ಮಂದಿರಕ್ಕೆ ಖರೀದಿಸಲಾಗಿದೆ. ಕಮಿಟಿಯವರು ಸದರಿ ಮ.ರಾ.ನಾರಾಯಣರಾಯರಿಗೆ ಧನ್ಯವಾದಗಳನ್ನು ಅರ್ಪಿಸಿರುತ್ತಾರೆ. ಇದಕ್ಕೂ ಸಹ ವಾರಸುದಾರರು ಇಲ್ಲದೆ ಮುಡಾದಿಂದ ನೇರವಾಗಿ ಪಡೆಯಲಾಗಿದೆ.

ದಿನಾಂಕ ೨೨.೦೩.೧೯೪೩ರ ಭಾನುವಾರ ಮಧ್ಯಾಹ್ನ ೪.೦೦ ಗಂಟೆಗೆ ನಡೆದ ಸಭೆಯಲ್ಲಿ ಮಂದಿರದ ವಾಯುವ್ಯ ಭಾಗದಲ್ಲಿದ್ದ ೧೩೬೩ ಮೂರು ಅಂಕಣದ ಕಟ್ಟಡವನ್ನು ಮಂದಿರಕ್ಕೆ ಅಕ್ವೈರುಮಾಡಿಕೊಂಡಿದ್ದು ಇದಕ್ಕೆ ರಿಪೇರಿ ವಗೈರೆ ಸೇರಿ ೧೦೭೩ ರೂಪಾಯಿಗಳಾಗಿದೆ. ಸದರಿ ಹಣವನ್ನು ಮ.ರಾ.ಎ. ರಾಮಣ್ಣನವರು ಮಂದಿರದ ಪರವಾಗಿ ಸಾಲ ಪಡೆದು ಖರೀದಿಸಲಾಗಿದೆ. ನಂತರ ಈ ಸಾಲದ ಹಣವನ್ನು ತೀರಿಸಲಾಗಿದೆ. ಇದಕ್ಕೂ ಸಹ ವಾರಸುದಾರರಿಲ್ಲದೆ ಟ್ರಸ್ಟ್‌ಬೋರ್ಡ್‌ನವರು ಅಕ್ವೈರ್‌ಮಾಡಿಕೊಳ್ಳುವ ಸಂದರ್ಭದಲ್ಲಿ ಅಧ್ಯಕ್ಷರಾದ ಲಿಂಗಪ್ಪಯ್ಯನವರ ಮುತ್ಸದ್ದಿತನದಿಂದ ಮಂದಿರಕ್ಕೆ ಲಭ್ಯವಾಗಿದೆ. ನಂತರ ೩೦.೦೫.೧೯೪೩ರ ನಡಾವಳಿಯಲ್ಲಿ ತಿಳಿಸಿರುವಂತೆ ಹಿಂಭಾಗದ ಕಟ್ಟಡ ಅಕ್ವಿಷಿಷನ್ ವಿಚಾರದಲ್ಲಿ ಬಾಕಿ ೪೭ ರೂಪಾಯಿಗಳನ್ನು ಟ್ರಸ್ಟ್‌ಬೋರ್ಡ್‌ಗೆ ಕಟ್ಟಲಾಗಿದೆ.

೧೯೪೩ರಲ್ಲಿ ಮೈಸೂರು ಮಹಾರಾಜರು ೧೫೮ನೇ ನಂಬರ್ ಡಿ.ಎ. ಮೂಲಕ ೬ ದೇವರ ಫೋಟೋಗಳನ್ನು ಹಾಗೂ ಹಿತ್ತಾಳೆ ಮಕರ ತೋರಣವನ್ನು ಸಹಾ ಮಂದಿರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಇದಕ್ಕೆ ಕಮಿಟಿ ಸದಸ್ಯರು ಕೃತಜ್ಞತೆ ಸಲ್ಲಿಸಿರುತ್ತಾರೆ. ಇದೇ ವರ್ಷದಲ್ಲಿ ಮ.ರಾ. ಎಂ.ವಿ. **ನಾರಾಯಣರಾಯರನ್ನು ಉಪಾಧ್ಯಕ್ಷರನ್ನಾಗಿ** ನೇಮಿಸಲಾಯಿತು.

೨೯.೦೪.೧೯೪೫ರ ಮೀಟಿಂಗ್ ನಡಾವಳಿಯಲ್ಲಿರುವಂತೆ ಮಂದಿರದ ಹಿಂಭಾಗದ ೧೩೬೪ ಮನೆಯನ್ನು ಟ್ರಸ್ಟ್ ಬೋರ್ಡ್ ಅಕ್ವೈರ್ ಮಾಡಿಕೊಂಡಿದ್ದು, ಅದು ರಾಮ ಮಂದಿರದ ಪರ ಅವಾರ್ಡ್ ಆಗಿದ್ದು, ಅವಾರ್ಡ್ ಸಂಖ್ಯೆ: ೪೩: ೪೩.೪೪, ದಿನಾಂಕ ೪.೪.೧೯೪೪ ಅವಾರ್ಡ್ ಮೊಬಲಗು ೨೮೮.೦೦ ಎಂದು ತೀರ್ಮಾನವಾಗಿದೆ. ನಂತರ ಈ ಅವಾರ್ಡ್ ಮೊಬಲಗು ಕಡಿಮೆಯೆಂದು, ಮೈಸೂರು ಅಡಿಷನಲ್ ಸಭಾಕ್ಕೆ ೬೦ : ೪೪.೪೫ ರಲ್ಲಿ ತಿಳಿಸಿದ್ದು, ನಂತರ ಚರ್ಚೆ ನಡೆದು ೩೫೭-೪-೧೧ ಹೆಚ್ಚಿಗೆ ಪರಿಹಾರ ದ್ರವ್ಯ ನೀಡಬೇಕೆಂದು ಆರ್ಡರ್ ಆಗಿರುತ್ತೆ. ಹೀಗಾಗಿ ಒಟ್ಟು ೬೪೫-೪-೧೧ ನ್ನು ಟ್ರಸ್ಟ್ ಬೋರ್ಡ್‌ಗೆ ಜಮಾ ಮಾಡಲು ಸಭೆ ನಿರ್ಧರಿಸಿದ್ದರೂ, ವಿ.ಲಿಂಗಪ್ಪಯ್ಯನವರು ಆಗಿನ ಸಭೆಯ ಅಧ್ಯಕ್ಷರು, ಟ್ರಸ್ಟ್ ಬೋರ್ಡ್ ಜೊತೆ ಬುದ್ಧಿವಂತಿಕೆಯಿಂದ ವ್ಯವಹರಿಸಿ ಪಾವತಿಸಬೇಕಾದ ಮೊಬಲಗನ್ನು ೪೭-೧೪-೮ ಕ್ಕೆ ನಿರ್ಧರಿಸಿ ಈ ಬಗ್ಗೆ ಅವಾರ್ಡ್ ಸಹಾ ಆಗಿ ರಾಮ ಮಂದಿರದಿಂದ ಹಣಪಾವತಿಸಲಾಗಿದೆ. ಇದನ್ನು ಸಹಾ ಟ್ರಸ್ಟ್ ಬೋರ್ಡ್‌ನಿಂದಲೇ ಪಡೆಯಲಾಗಿದೆ.

೧೯೪೭ರ ಅವಧಿಯಲ್ಲಿ ಮಂದಿರದ ವಶದಲ್ಲಿದ್ದ ೧೫೦೩ನೇ ನಂಬರ್ ಮನೆಯನ್ನು ಬಹಳ ಶಿಥಿಲಾವಸ್ಥೆಯಲ್ಲಿದ್ದುದರಿಂದ ಟ್ರಸ್ಟ್ ಬೋರ್ಡ್ ಅಕ್ವೈರ್ ಮಾಡಿಕೊಳ್ಳಲು ಮುಂದಾದಾಗ ಸಭೆಯ ಅಧ್ಯಕ್ಷರು ಮುಂದಾಗಿ ಸದರಿ ಮನೆಯ ಬಾಡಿಗೆದಾರರನ್ನು ಒಂದು ತಿಂಗಳ ಮಟ್ಟಿಗೆ ಖಾಲಿ ಮಾಡಿಸಿ ಸದರಿ ಮನೆಯನ್ನು ರಿಪೇರಿ ಮಾಡಿಸಿ ಮಂದಿರದ ವಶದಲ್ಲೇ ಇಟ್ಟುಕೊಂಡಿರುತ್ತಾರೆ.

ದಿನಾಂಕ ೮.೩.೧೯೪೯ರಲ್ಲಿ ನಡೆದ ಕಮಿಟಿ ಮೀಟಿಂಗ್‌ನಲ್ಲಿ ನಡೆದ ಚರ್ಚೆಯನ್ನು ಪರಿಶೀಲಿಸಿ, ದಿನಾಂಕ <u>೧೩.೦೩.೧೯೪೯ರಲ್ಲಿ ರಾಮಮಂದಿರದ ಆಡಳಿತ ವ್ಯವಹಾರವನ್ನು ಉಲುಚುನಾಡು ಸಭಾ ವ್ಯವಹಾರದಿಂದ ಪ್ರತ್ಯೇಕಿಸಲಾಯಿತು.</u> ಇಲ್ಲಿಂದ ಮುಂದೆ ರಾಮ ಮಂದಿರದ ಲೆಕ್ಕಪತ್ರಗಳನ್ನು ಪ್ರತ್ಯೇಕವಾಗಿ ನಿರ್ವಹಿಸಲಾಗಿದೆ.

೧೯೫೦ರಲ್ಲಿ ಸಂಸ್ಕೃತ ಪ್ರೊಫೇಸರ್ ಶ್ರೀ ಎಂ. ಹಿರಿಯಣ್ಣನವರು ಉಲುಚುನಾಡು ಸಭಾದ ಅಧ್ಯಕ್ಷರು ಮಂದಿರದ ಶ್ರೇಯೋಭಿವೃದ್ಧಿಗೆ ಹೇರಳವಾಗಿ ಧನಸಹಾಯವನ್ನು ಮಾಡಿರುತ್ತಾರೆ. ಮುಖ್ಯವಾಗಿ ಯಾವುದೋ ಷರತ್ತಿನ ಮೇಲೆ ರೂ. ೨,೦೦೦.೦೦ ವನ್ನು ಮಂದಿರಕ್ಕೆ ನೀಡಿರುವುದು ಕಂಡುಬಂದಿದೆ. ಆ ಷರತ್ತನ್ನು ಹಾಗೂ ಅವರ ಸದುದ್ದೆಶವನ್ನು ಪೂರೈಸುವುದಾಗಿ ಆಗಿನ ಅಧ್ಯಕ್ಷರಾಗಿದ್ದ ವಿ.ಲಿಂಗಪ್ಪಯ್ಯನವರು ವಾಗ್ದಾನ ಮಾಡಿದ್ದು, ಇವರ ಈ ಸೇವೆ ಶ್ಲಾಘನೀಯವಾದದ್ದು.

೧೯೫೫ರಲ್ಲಿ ಮಂದಿರದ ಪೂರ್ವ ಭಾಗದಲ್ಲಿದ್ದ ೧೩೬೨ ಹಳೆಯ ಮನೆಗಳನ್ನು ಕೆಡವಿಸಿ, ಆ ಜಾಗದಲ್ಲಿ ಅಂಗಡಿ ಮಳಿಗೆಗಳನ್ನು ಕಟ್ಟಿಸಿ ಬಾಡಿಗೆ ಬರುವ ಯೋಜನೆ ಹಾಕಿಕೊಳ್ಳಲಾಯಿತು. ಉತ್ತರಭಾಗದಲ್ಲಿದ್ದ ೧೩೬೪ ಒಂದು ಮನೆಯನ್ನೂ ಮತ್ತು ಗರ್ಭಾಂಕಣವನ್ನು ಪ್ರತ್ಯೇಕಿಸಲಾಯಿತು.

ಮಹಡಿಯ ಮೇಲ್ಭಾಗದಲ್ಲಿ ಕೊಠಡಿಗಳನ್ನು ನಿರ್ಮಿಸಲು ಯೋಜನೆಯೊಂದನ್ನು ರೂಪಿಸಲಾಯಿತು. ಇದಕ್ಕೆ ತಗಲುವ ವೆಚ್ಚವನ್ನು ಭರಿಸುವ ಸಲುವಾಗಿ ಸಾರ್ವಜನಿಕರಲ್ಲಿ ಒಂದು ಮನವಿ ಮಾಡಿ ರೂ. ೧೦೦.೦೦ ರಿಂದ ರೂ.೧,೦೦೦.೦೦ ದವರೆಗೆ ಪುದುವಟ್ಟು ಹಣವನ್ನು ಸಂಗ್ರಹಿಸುವ ಯೋಜನೆಯನ್ನು ಸಿದ್ದಪಡಿಸಿಕೊಳ್ಳಲಾಯಿತು.

ಇದರ ಪ್ರತಿಫಲವಾಗಿ ಪುದುವಟ್ಟುದಾರರಿಗೆ ಅವರು ಇಷ್ಟಪಟ್ಟ ದಿನವೇ ಶ್ರೀ ರಾಮದೇವರಿಗೆ ಅವರು ಸೂಚಿಸಿರುವವರ ಹೆಸರಿನಲ್ಲಿ ಒಂದು ದಿನದ ಸೇವೆಯನ್ನು ನಡೆಸಲಾಗುತ್ತಿದೆ. ಈ ಪದ್ಧತಿ ಇಂದಿಗೂ ಅವ್ಯಾಹತವಾಗಿ ನಡೆದುಕೊಂಡು ಬರುತ್ತಿದೆ.  ಈ ಪದ್ಧತಿಯ ಯಶಸ್ಸಿಗೆ ಅಂದಿನ **ಶ್ರೀ ವೆಂಕಟಕೃಷ್ಣಯ್ಯನವರು** ಮೂಲ ಕಾರಣಕರ್ತರಾಗಿದ್ದಾರೆ. ಈ ಯೋಜನೆ ಕಾರ್ಯಗತವಾದದ್ದು ೧೯೫೬ರಲ್ಲಿ.  ಶ್ರೀಯುತರೂ ಸಹಾ ಶ್ರೀ ರಾಮಮಂದಿರದ ಇತಿಹಾಸದಲ್ಲಿ ಸ್ತುತ್ಯರ್ಹರಾಗಿದ್ದಾರೆ.

೧೯೫೬ರಲ್ಲಿ ಮಂದಿರದ ಪೂರ್ವಭಾಗದಲ್ಲಿದ್ದ ಹಳೆಯ ಮನೆಗಳನ್ನು ಕೆಡವಿ ಅಂಗಡಿ ಮಳಿಗೆಗಳನ್ನು ಕಟ್ಟಿಸಿ ಮಂದಿರದ ಖರ್ಚಿಗೆ ಹೆಚ್ಚಿಗೆ ಆದಾಯ ಬರುವಂತೆ ವ್ಯವಸ್ಥೆ ಮಾಡಲಾಯಿತು.  ಅಧ್ಯಕ್ಷರಾಗಿದ್ದ ಶ್ರೀ ವಿ.ಲಿಂಗಪ್ಪಯ್ಯನವರು ಹೆಚ್ಚಿನ ಮುತುವರ್ಜಿ ವಹಿಸಿ, ವ್ಯವಹರಿಸಿ ಈ ಮನೆಗಳನ್ನು ಮಂದಿರಕ್ಕೆ ದೊರಕಿಸಿಕೊಡಲು ಕಾರಣೀಭೂತರಾಗಿದ್ದಾರೆ.  ಆಗಿನ ಕಾರ್ಯದರ್ಶಿಗಳಾಗಿದ್ದ ಟಿ.ವೆಂಕಟಕೃಷ್ಣಯ್ಯ (ತಹಶೀಲ್ದಾರ್‌ರರಾಗಿದ್ದವರು) ನವರ ಅಪಾರ ಶ್ರದ್ಧೆ, ಆಸಕ್ತಿಯ ಫಲವಾಗಿ ಅಭಿವೃದ್ಧಿ ಕಾರ್ಯಗಳಿಗೆ ನೆರವು ದೊರೆಯಿತು.  ಇವರೂ ಸಹ ಶ್ರೀ ರಾಮಾಭ್ಯುದಯ ಸಬಾದ ಇತಿಹಾಸದಲ್ಲಿ ಅಭಿನಂದನೀಯರು.

ಈ ಅವಧಿಯಲ್ಲಿಯೇ ರೂ. ೧೦೦೦.೦೦ ಮತ್ತು ಮೇಲ್ಪಟ್ಟು ವಿನಿಯೋಗಿಸುವ ದಾನಿಗಳ ಚಿತ್ರಪಟಗಳನ್ನು ಮಂದಿರದಲ್ಲಿ ಹಾಕುವ ಪದ್ದತಿ ಆರಂಭವಾಯಿತು.  ಅಂತಹವರ ಹೆಸರಿನಲ್ಲಿ ಪುದುವಟ್ಟು ಸೇವೆಯೂ ಸಹಾ ನಡೆಯುತ್ತಿದೆ.

ಸೇವಾಕಾಂಕ್ಷಿಗಳು ಶ್ರೀ ರಾಮಮಂದಿರಕ್ಕೆ ತಮ್ಮ ತನು ಮನ ಧನವನ್ನು ಸಲ್ಲಿಸಿ ಸೇವೆಗೈದಿದ್ದಾರೆ. ಅವರೆಲ್ಲರೂ ಶ್ರೀ ರಾಮ ಮಂದಿರದ ಇತಿಹಾಸದಲ್ಲಿ ವಂದನಾರ್ಹರು.

೧೯೫೭ರಲ್ಲಿ ಕೆಲವು ಹಳೆಯ ಅನುಪಯುಕ್ತ ಪಾತ್ರೆಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಲಾಗಿದೆ.

ಮೈಸೂರು ದಿವಾನರಾಗಿದ್ದ ಶ್ರೀಯುತ ಎಂ.ಎನ್.ಕೃಷ್ಣರಾಯರು ೧೯೫೮ರಲ್ಲಿ ದೈವಾದೀನರಾದರು. ವಿಶೇಷವೆಂದರೆ ಇವರು ಉಲುಚುಕೆಮ್ಮೆ ಜನಾಂಗದ ಮುಖ್ಯಸ್ಥರಾಗಿದ್ದು ಬಹಳ ಜನಾನುರಾಗಿಯಾಗಿ ಸೇವೆ ಸಲ್ಲಿಸಿದ್ದರು.  ಶ್ರೀ ರಾಮಾಭ್ಯುದಯ ಸಭೆಗೆ ಹಾಗೂ ರಾಮಮಂದಿರದ ಅಭಿವೃದ್ಧಿಗೆ ಇವರು ಬಹಳ ಸಹಾಯ ಮಾಡಿರುತ್ತಾರೆ.  ಇವರೂ ಸಹ ಶ್ರೀರಾಮಾಭ್ಯುದಯ ಸಭಾದ ಇತಿಹಾಸದಲ್ಲಿ ಸ್ಮರಿಸತಬಹುದಾದ ವ್ಯಕ್ತಿಯಾಗಿದ್ದಾರೆ.

ಸುಮಾರು ೩೦-೩೫ ವರ್ಷಗಳಿಂದ ಬಾಲಕರ ರಾಮಮಂದಿರವೆಂದು ಇದೇ ಪೇಟೆಯ ಯುವಕರು, ಮನ್ನಾರ್ ಕೃಷ್ಣಶೆಟ್ಟರ ವಿದ್ಯಾರ್ಥಿನಿಲಯದ ಒಂದು ಮಳಿಗೆಯಲ್ಲಿ ರಾಮೋತ್ಸವವನ್ನು ನಡೆಸುತ್ತಿದ್ದರು.  ಅವರು ರಾಮಾಭ್ಯುದಯ ಸಭಾದ ಸದಸ್ಯರೊಂದಿಗೆ ವಿಷಯ ವಿನಿಮಯ ಮಾಡಿಕೊಂಡು ೧೯೬೦ರಲ್ಲಿ ಶ್ರೀ ರಾಮಾಭ್ಯುದಯ ಸಭೆಯಲ್ಲಿ ವಿಲೀನರಾದರು.  ಯುವಕರ ರಾಮಮಂದಿರಕ್ಕೆ ಸೇರಿದ ಆಸ್ತಿಪಾಸ್ತಿಯೂ ಸಹಾ ರಾಮಾಭ್ಯುದಯ ಸಭೆಯಲ್ಲಿ ಒಂದಾಯಿತು.  ಅಲ್ಲಿಯ ಸಮಿತಿಯ ಸದಸ್ಯರನ್ನು ರಾಮಾಭ್ಯುದಯ ಸಭಾದ ಸದಸ್ಯರೆಂದೇ ಪರಿಗಣಿಸಲಾಯಿತು.  ಈಗ ಪ್ರಸ್ತುತ ಸದರಿ ಯುವಕರ ರಾಮಮಂದಿರದಲ್ಲಿದ್ದ ಶ್ರೀ ರಾಮಚಂದ್ರಸ್ವಾಮಿಯ ಎರಡು ಫೋಟೋಗಳು ಗರ್ಭಗುಡಿಯಲ್ಲಿಟ್ಟು ಪೂಜಿಸಲಾಗುತ್ತಿದೆ.

ಈ ಯುವಕರ ರಾಮಮಂದಿರದ ವಿಲೀನದ ಸವಿನೆನಪಿಗಾಗಿ ಈಗಲೂ ಸಹಾ ರಾಮೋತ್ಸವದ ಕೊನೆಯ ದಿವಸ **<u>ಒಳಗುಡಿ ಸೇವಾರ್ಥವೆಂಬ</u>** ಸೇವೆಯನ್ನು ನಡೆಸಲಾಗುತ್ತಿದೆ.

ಈ ಯುವಕರ ರಾಮಮಂದಿರದ ಸದಸ್ಯರನ್ನು ೧೯೬೦ರ ರಾಮೋತ್ಸವದ ಸಂಚಿಕೆಯಲ್ಲಿನ ಫೋಟೋದಲ್ಲಿ ಕಾಣಬಹುದಾಗಿದೆ.

೧೯೬೧ರಲ್ಲಿ ಶೃಂಗೇರಿ ಮಹಾಸ್ವಾಮಿಗಳ ಪಾದಪೂಜೆಯನ್ನು ನಡೆಸಲಾಯಿತು.

೧೯೬೨ರಲ್ಲಿ ಕೂಡಲಿ ಸ್ವಾಮಿಗಳ ಪಾದಪೂಜೆ ನಡೆಯಿತು.

<u>ಅಭ್ಯುದಯದ ಮಧ್ಯಕಾಲ</u>

೧೯೬೩ರಲ್ಲಿ ಏಪ್ರಿಲ್ ತಿಂಗಳಲ್ಲಿ ಅರವತ್ತು ವರ್ಷಗಳನ್ನು ಪೂರೈಸಿದ ನೆನಪಿಗಾಗಿ ಮಂದಿರದ **<u>ವಜ್ರೋತ್ಸವವನ್ನು</u>** ಬಹು ವಿಜೃಂಭಣೆಯಿಂದ ನೆರವೇರಿಸಲಾಯಿತು. ಶೋಭಕೃತ್ ಸಂವತ್ಸರದ ಚೈತ್ರಶುದ್ಧ ನವಮಿಯಿಂದ ಚೈತ್ರ ಬಹುಳ ದ್ವಾದಶಿಯವರೆಗೆ ರಾಮೋತ್ಸವ ಮತ್ತು ವಜ್ರೋತ್ಸವ ಜೊತೆ ಜೊತೆಯಲ್ಲಿ ಜರುಗಿತು.

ವಜ್ರೋತ್ಸವ ಕಾರ್ಯಕ್ರಮಗಳಲ್ಲಿ ಶ್ರೀ ಮದ್ರಾಮಾಯಣ ಪಾರಾಯಣ, ಋಗ್ವೇದ, ಯಜುರ್ವೇದ ಹಾಗೂ ಸಾಮವೇದ ಪಾರಾಯಣಗಳು, ರಾಮತಾರಕ ಹೋಮ ಮತ್ತು ನವಗ್ರಹ ಜಪ, ಸೂರ್ಯ ನಮಸ್ಕಾರ, ಮಹಾಭಿಷೇಕ, ಲಕ್ಷಾರ್ಚನೆಯ ಅಂಗವಾಗಿ ಸಹಸ್ರನಾಮಾರ್ಚನೆಗಳು, ಪ್ರತಿದಿನ ಬೆಳಿಗ್ಗೆ ೮.೩೦ ರಿಂದ ೧೨.೩೦ ರವರೆಗೆ ನಡೆಯುತ್ತಿತ್ತು. ಸಂಜೆ ರಾಮದೇವರ ಅರ್ಚನೆ, ಸೀತಮ್ಮನವರಿಗೆ ಕುಂಕುಮಾರ್ಚನೆ ನಂತರ ಭಜನೆ ಇದಲ್ಲದೆ ಶ್ರೀ ಕೂಡಲಿಯ ಶ್ರೀ ಸಚ್ಚಿದಾನಂದ ಶಂಕರಭಾರತಿ ಸ್ವಾಮಿಗಳಿಂದ ರಾಮಾಯಣ ಉಪನ್ಯಾಸ ಸಪ್ತಾಹ, ನಂತರ ಮಹಾ ಮಂಗಳಾರತಿ, ರಾಷ್ಟ್ರಾಶೀರ್ವಾದ ಮತ್ತು ಅಷ್ಟಾವಧಾನ ಸೇವೆಗಳು ನಡೆಯುತ್ತಿತ್ತು. ರಾಮಾಯಣ ಉಪನ್ಯಾಸದ ನಂತರ ಸಂಗೀತ, ಹರಿಕಥೆಗಳು ನಡೆಯುತ್ತಿತ್ತು.

೧೯೬೩ರಲ್ಲಿ ಶ್ರೀ ರಾಮಾಭ್ಯುದಯ ಸಭೆಯನ್ನು ನೋಂದಾಯಿಸಲಾಯಿತು.

೧೯೬೩ನೇ ಜನವರಿಯಲ್ಲಿ ಮೊದಲನೇ ಸರ್ವಸದಸ್ಯರ ಸಭೆ (ಜನರಲ್ ಬಾಡಿ ಮೀಟಿಂಗ್)ನಡೆಯಿತು.

೧೯೬೩ರ ಏಪ್ರಿಲ್ ೨೦ ರಂದು ಚೈತ್ರ ಬಹುಳ ಏಕಾದಶಿಯ ಶನಿವಾರ ಬೆಳಿಗ್ಗೆ ಶ್ರೀರಾಮ ತಾರಕ ಹೋಮವನ್ನು ನಡೆಸಿ ಪೂರ್ಣಾಹುತಿಯೊಂದಿಗೆ ವಜ್ರೋತ್ಸವದ ಸಮಾರಂಭವನ್ನು ಮಂಗಳ ಮಾಡಿ, ದಿನಾಂಕ ೨೧.೦೪.೧೯೬೩ನೇ ಭಾನುವಾರ ಚೈತ್ರ ಬಹುಳ ದ್ವಾದಶಿ ಮಧ್ಯಾಹ್ನ ೧೨.೩೦ಕ್ಕೆ ಪಟ್ಟಾಭಿಷೇಕವನ್ನು ನೆರವೇರಿಸಲಾಯಿತು. ಲೋಕಾಃ ಸಮಸ್ತಾಃ ಸುಖಿನೋ ಭವಂತು ಎಂಬ ಸೂಕ್ತಿಯಂತೆ ಈ ವಜ್ರೋತ್ಸವದ ವಿಶೇಷ ಕಾರ್ಯಕ್ರಮಗಳು ಮುಕ್ತಾಯ ಮಾಡಲಾಯಿತು.

ಈ ಸಂದರ್ಭದಲ್ಲಿ ಶ್ರೀ ಆರ್.ಎಂ. ಕೇಸರಿಯವರು ರಾಮದೇವರ ವಿಶೇಷ ಸ್ತೋತ್ರಗಳನ್ನು ರಚಿಸಿದರು. ಈ ಸಂದರ್ಭದಲ್ಲಿ ಶ್ರೀ ಕೂಡಲಿ ಶೃಂಗೇರಿ ಜಗದ್ಗುರು ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳು, ಶ್ರೀ ಜಗದ್ಗುರು ಮಹಾಸಂಸ್ಥಾನದ ಶಾರದಾ ಪೀಠ ವಿದ್ಯಾಭಿನವ ಭಾರತೀ ತೀರ್ಥ ಸ್ವಾಮಿಗಳು ಅನುಗ್ರಹ ಸಂದೇಶಗಳನ್ನು ಕಳುಹಿಸಿರುತ್ತಾರೆ.

ಆಗಿನ ಕಾಲದಲ್ಲಿ ಸರ್ವಶ್ರೀ ಲಿಂಗಪ್ಪಯ್ಯನವರು ಅಧ್ಯಕ್ಷರಾಗಿದ್ದರು, ಎಂ.ಆರ್. ವೆಂಕಟಸುಬ್ಬಾಶಾಸ್ತ್ರಿಗಳು ಉಪಾಧ್ಯಕ್ಷರಾಗಿ, ನಾಗರಾಜಶರ್ಮ ಗೌರವ ಕಾರ್ಯದರ್ಶಿಯಾಗಿ, ಎನ್.ಆರ್. ರಂಗರಾವ್‌ರವರು ಸಹ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ್ದರು.

ವಜ್ರೋತ್ಸವದ ಸವಿನೆನಪಿಗಾಗಿ ಬೆಳ್ಳಿಯ ಸುಮಾರು ಅರ್ಧ ಕೆ.ಜಿ. ತೂಕದ ರಾಮ, ಲಕ್ಷ್ಮಣ, ಸೀತೆ, ಆಂಜನೇಯ ಇವರ ಪ್ರಭಾವಳಿಯಿರುವ ಬೆಳ್ಳಿಯ ವಿಗ್ರಹವನ್ನು ಒಂದು ಸೆಟ್ ಖರೀದಿಸಲಾಯಿತು. ಪ್ರತಿವರ್ಷವೂ ರಾಮೋತ್ಸವದ ಕಾಲದಲ್ಲಿ ಈ ವಿಗ್ರಹವನ್ನಿಟ್ಟು ಸಹಸ್ರನಾಮಾರ್ಚನೆಯು ಈಗಲೂ ನಡೆಯುತ್ತಿದೆ. ಈ ಸಹಸ್ರನಾಮಾರ್ಚನೆ ಭಕ್ತಾದಿಗಳಿಂದ ಸೇವಾರ್ಥ ರೂಪದಲ್ಲಿ ಬೆಳಿಗ್ಗೆ ೮.೩೦ ರಿಂದ ೧೨.೦೦ ಗಂಟೆಯವರೆಗೆ ರಾಮೋತ್ಸವದ ವೇಳೆ ನಿರಂತರವಾಗಿ ನಡೆಯುತ್ತಿದೆ.

ವಜ್ರೋತ್ಸವದ ಸವಿನೆನಪಿಗಾಗಿ ಶ್ರೀ ಕೆ.ಪಿ. ಗುಂಡಪ್ಪನವರು ಆರು ತೇಗದ ಮರದ ಬೆಂಚುಗಳನ್ನು ಮತ್ತು ಶಯನೋತ್ಸವಕ್ಕೆ ಒಂದು ಚಿಕ್ಕ ಮಂಚ, ಸೊಳ್ಳೆಪರದೆ, ಹಾಸಿಗೆ ಇತ್ಯಾದಿಗಳನ್ನು ಮಾಡಿಸಿಕೊಟ್ಟರು.

೧೯೬೪ರಲ್ಲಿ ಮಂದಿರದ ಪರವಾಗಿ ಕೆ.ಆರ್.ನಗರದ ಯೋಗಾನಂದ ಮಠದ ಶ್ರೀ ಶಂಕರಾನಂದ ಸ್ವಾಮಿಗಳ ಪಾದಪೂಜೆ ನಡೆಯಿತು.

" **ಶ್ರೀ ದೇವಿ ಭಾಗವತ** " ನಡೆದು ಮಂಗಳಕಾರ್ಯಕ್ರಮ ನಡೆದಿದೆ ಹಾಗೂ ೬.೧೧.೧೯೬೬ ರಲ್ಲಿ ಚಂಡೀ ಹೋಮ ರಾಮಮಂದಿರದಲ್ಲಿ ಏರ್ಪಾಟಾಗಿ ನಡೆದಿರುತ್ತೆ.

ಸಭೆಯ ಅಧ್ಯಕ್ಷರಾಗಿದ್ದ ಶ್ರೀ ವಿ.ಲಿಂಗಪ್ಪಯ್ಯನವರು ೧೯೬೭ರಲ್ಲಿ ಸ್ವರ್ಗಸ್ಥರಾದರು. ಇವರು ಸುಮಾರು ೩೪ ವರ್ಷಗಳ ಕಾಲ ಸುವ್ಯವಸ್ಥಿತವಾಗಿ ಸಭೆಯನ್ನು ನಡೆಸಿಕೊಂಡು ಬಂದಿದ್ದರು. ಇವರ ಸ್ಥಾನಕ್ಕೆ ಎಂ.ಆರ್.ವೆಂಕಟಸುಬ್ಬಾಶಾಸ್ತ್ರಿಗಳನ್ನು ಅಧ್ಯಕ್ಷರನ್ನಾಗಿ ಮಾಡಲಾಯಿತು.

ಇದೇ ವರ್ಷ ರಕ್ಷಣಾ ನಿಧಿಗೆಂದು ೧೦೧.೦೦ ರೂಪಾಯಿಗಳನ್ನು ಕಳುಹಿಸಲಾಯಿತು.

೧೯೬೯ರಲ್ಲಿ ಬೈಲಾ ರಚಿಸಲಾಯಿತು.

೧೪.೧೨.೧೯೬೯ ರಂದು ಆಸ್ಥಾನ್ ವಿದ್ವಾನ್ ವೇ|| ಬ್ರ|| ಶ್ರೀ|| ವೆಂಕಟಾಚಲ ಅವಧಾನಿಗಳಿಗೆ ಸನ್ಮಾನ ಮಾಡಲಾಯಿತು. ಶ್ರೀಯುತರು ರಾಮಮಂದಿರಕ್ಕೆ ಡೋನೇಷನ್ ನೀಡಿರುತ್ತಾರೆ.

ಪ್ರೊಫೇಸರ್ ಲೇಟ್ ಹಿರಿಯಣ್ಣನವರ ಮೊಮ್ಮಕ್ಕಳಾದ ಡಾ. ಎಂ.ಅನಂತಸ್ವಾಮಿಗಳು ಕೆಲವು ಸಾಲಿಗ್ರಾಮಗಳನ್ನು ದೇವಸ್ಥಾನಕ್ಕೆ ಕೊಟ್ಟು, ಸಾಲಿಗ್ರಾಮದ ಪೂಜೆ ಹಾಗೂ ನೈವೇದ್ಯವನ್ನು ನಡೆಸಲು ರೂ. ೨,೦೦೦.೦೦ ಪುದುವಟ್ಟು ಕೊಟ್ಟಿರುತ್ತಾರೆ. ಅದಕ್ಕಾಗಿ ಅರ್ಚಕರು ಪ್ರತಿದಿನ ಮಹಾನೈವೇದ್ಯವನ್ನು ಅರ್ಪಿಸಲು ಮಾಸಿಕ ೪೦.೦೦ ರೂ. ಕೊಡುವಂತೆ ಸಮಿತಿ ತೀರ್ಮಾನಿಸಿತು.

೧೯೭೦ರಲ್ಲಿ ಎರಡನೇ ಸರ್ವಸದಸ್ಯರ ಸಭೆ ನಡೆಯಿತು.

ರಾಮಮಂದಿರಕ್ಕೆ ಹಾಗೂ ಬ್ರಾಹ್ಮಣ ಸಮುದಾಯಕ್ಕೆ ಪುರೋಹಿತರಾಗಿದ್ದ ವೇ|| ಬ್ರ|| ಶ್ರೀ|| ವೆಂಕಟಕೃಷ್ಣದೀಕ್ಷಿತ್ ದಿನಾಂಕ ೨೩.೦೩.೧೯೭೧ ರಂದು ದೈವಾದೀನರಾದರು. ಕಮಿಟಿ ಮೆಂಬರಾಗಿದ್ದ ಎನ್. ಭಾಸ್ಕರಪ್ಪನವರು ೨೬.೧೦.೧೯೭೧ ರಂದು ಭಗವಂತನ ಸಾನಿಧ್ಯ ಸೇರಿದರು. ಬಿದರೆ ರಾಮಕೃಷ್ಣಶಾಸ್ತ್ರಿಗಳು ದಿನಾಂಕ ೨೫.೦೮.೧೯೭೧ ರಂದು ದೇವರ ಪಾದ ಸೇರಿದರು.

೧೯೫೦ - ೧೯೭೦ ರ ಅವಧಿಯಲ್ಲಿ ರಾಮೋತ್ಸವದ ವೇಳೆ ಪಟ್ಟಾಭಿಷೇಕದ ದಿವಸ ನಂಜರಾಜಬಹುದ್ದೂರ್ ಛತ್ರದಲ್ಲಿ ಸುಮಾರು ೧೦,೦೦೦ ಜನಕ್ಕೆ ಅನ್ನಸಂತರ್ಪಣೆ ಬಹು ವಿಜೃಂಭಣೆಯಿಂದ ನಡೆಯುತ್ತಿತ್ತು.

೧೯೭೭ರಲ್ಲಿ ಉಪಾಧ್ಯಕ್ಷರಾಗಿದ್ದ ಶ್ರೀ ಕೆ.ಪಿ.ಗುಂಡಪ್ಪನವರು ಸ್ವರ್ಗಸ್ಥರಾದರು. ಆ ಸ್ಥಳಕ್ಕೆ ಆರ್.ಎ. ಕೇಸರಿಯವರನ್ನು ಭರ್ತಿ ಮಾಡಲಾಯಿತು.

೧೯೮೧ರಲ್ಲಿ ಮೂರನೇ ಸರ್ವಸದಸ್ಯರ ಸಭೆ (ಜನರಲ್ ಬಾಡಿ ಮೀಟಿಂಗ್)ನಡೆಯಿತು.

<u>ನವಯುಗದ ಅಭ್ಯುದಯದ ಕಾಲ</u>

೧೯೮೩ರಲ್ಲಿ ೧೫೦೩ನೇ ನಂಬರಿನ ಮನೆಯನ್ನು ಡಾ.ಎನ್.ಶ್ರೀರಾಮ್‌ರವರಿಗೆ ಮೂವತ್ತು(30) ವರ್ಷಗಳ ಭೋಗ್ಯಕ್ಕೆ ನೀಡಲಾಯಿತು. ಇದಕ್ಕಾಗಿ ಶ್ರೀರಾಮಮಂದಿರಕ್ಕೆ (ಈ ಮೂವತ್ತು ವರ್ಷಗಳಲ್ಲಿ ಸಭೆ ನಿರ್ಧರಿಸಿರುವ ಕನಿಷ್ಠ ಬಾಡಿಗೆ) ಬಾಡಿಗೆ ಬರುವಂತೆಯೂ 30 ವರ್ಷಗಳ ನಂತರ ಇವರ ಚಿಕಿತ್ಸಾಲಯದ ಹೊಸ ಕಟ್ಟಡವನ್ನು ಯಥಾಸ್ಥಿತಿಯಲ್ಲಿ ಬಿಟ್ಟುಕೊಡುವಂತೆ, ಲೀಸ್‌ದಾರರು ಒಪ್ಪಿದರೆ ರಾಮಾಭ್ಯುದಯ ಸಭಾ ಸಮಿತಿಯವರು ಗೊತ್ತು ಮಾಡುವ ಬಾಡಿಗೆಯನ್ನು ಕೊಡಬೇಕೆಂದು ಒಪ್ಪಂದ ಮಾಡಿಕೊಳ್ಳಲಾಗಿದೆ.

೧೯೮೩ರಲ್ಲಿ ಅಕ್ಟೋಬರ್ ಮಾಹೆಯಲ್ಲಿ 8 -10 ವರ್ಷಗಳಿಂದ ನಿಂತು ಹೋಗಿದ್ದ ಪುರಾಣ ಪ್ರವಚನಗಳು ಪುನಃ ಪ್ರಾರಂಭಿಸಲಾಯಿತು. ೧೯೮೩ರಲ್ಲಿ ಅಧ್ಯಕ್ಷರಾಗಿದ್ದ ಎಂ.ಆರ್. ವೆಂಕಟಸಬ್ಬಾಶಾಸ್ತ್ರಿಗಳು ಅನಾರೋಗ್ಯ ನಿಮಿತ್ತ ನಿವೃತ್ತರಾದರು. ಶ್ರೀ ವಿ.ಎಲ್.ಲಿಂಗಪ್ಪಯ್ಯನವರ ಮಕ್ಕಳಾದ ಶ್ರೀ ವಿ.ಎಲ್.ರಾಮಚಂದ್ರರಾಯರನ್ನು ಅದ್ಯಕ್ಷರನ್ನಾಗಿ ಚುನಾಯಿಸಲಾಯಿತು. ಸರ್ವಶ್ರೀ ಎ.ಆರ್.ನಾಗರಾಜಶರ್ಮರವರ ಜೊತೆಗೆ ಶ್ರೀ ವಿ.ಎಸ್.ಶ್ರೀಕಂಠಶಾಸ್ತ್ರಿಗಳನ್ನು ಸಹ ಕಾರ್ಯದರ್ಶಿಗಳನ್ನಾಗಿ ಚುನಾಯಿಸಲಾಯಿತು.

ಶ್ರೀ ವಿ.ಎಲ್.ರಾಮಚಂದ್ರರಾವ್‌ರವರು ತಮ್ಮ ದಿವಂಗತ ತಂದೆ ವಿ.ಎಲ್.ಲಿಂಗಪ್ಪಯ್ಯನವರ ಸ್ಮರಣಾರ್ಥವಾಗಿ ಮಂದಿರಕ್ಕೆ ಟೀಕ್‌ವುಡ್ ಟೇಬಲ್ ವಿತ್ ಡ್ರಾಯರ್ ಮತ್ತು ಕೈಯಿರುವ ಕುರ್ಚಿಯನ್ನು ನೀಡಿರುತ್ತಾರೆ. ಇದು ಪ್ರಸ್ತುತ ಮಂದಿರದಲ್ಲೇ ಇರುತ್ತದೆ.

೧೯೮೭ರ ನವೆಂಬರ್ ವೇಳೆಗೆ ಸದಸ್ಯರಾಗಿದ್ದ ಶ್ರೀ ಎಂ.ಎಸ್.ಕೃಷ್ಣಸ್ವಾಮಿರಾವ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರ ಜವಾಬ್ದಾರಿಯುತ ನೇತೃತ್ವದಲ್ಲಿ ಮಹಡಿ ಮೇಲಿನ ಶತಮಾನೋತ್ಸವ ಸಭಾಂಗಣ ಕಾರ್ಯವನ್ನು ಪೂರ್ಣಗೊಳಿಸಲಾಯಿತು. ಈ ಮಹನೀಯರಿಗೆ ಅನಂತ ಧನ್ಯವಾದಗಳನ್ನು ಸಮಿತಿಯವರು ಅರ್ಪಿಸಿರುತ್ತಾರೆ. ಇವರನ್ನೂ ಸಹ ಶತಮಾನೋತ್ಸವ ಸಮಾರಂಭದಲ್ಲಿ ಸನ್ಮಾನಿಸಲಾಯಿತು.

ಈ ಶತಮಾನೋತ್ಸವ ಕಟ್ಟಡ ನಿಧಿಗೆ ಎಲ್ಲಾ ಸದಸ್ಯರೂ ರೂ. ೨೫೦.೦೦ ರಂತೆ ಧನಸಹಾಯ ಮಾಡಿರುತ್ತಾರೆ.

೧೯೮೭ನೇ ಇಸವಿ ಸೆಪ್ಟಂಬರ್ ತಿಂಗಳ ೨೦ನೇ ತಾರೀಖಿನಂದು ಈಗಿನ ಶೃಂಗೇರಿ ಜಗದ್ಗುರು ಶ್ರೀ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ಪಟ್ಟಾಭಿಷೇಕ ಮಹೋತ್ಸವಕ್ಕೆ ಶ್ರೀ ರಾಮಾಭ್ಯುದಯ ಸಭೆಯ ಪರವಾಗಿ ಕಾರ್ಯದರ್ಶಿಗಳಾದ ಶ್ರೀ ವಿ.ಎಸ್.ಶ್ರೀಕಂಠಶಾಸ್ತ್ರಿಗಳು ಮತ್ತು ಸದಸ್ಯರಾಗಿದ್ದ ಶ್ರೀ ರಾ. ಅನಂತರಾಮು ಭಾಗವಹಿಸಿದ್ದರು. ಆ ಸಂದರ್ಭದಲ್ಲಿ ಪಟ್ಟಾಭಿಷೇಕ ಮಹೋತ್ಸವದಲ್ಲಿ ಶ್ರೀ ಗುರುಪರಂಪರೆಯ ಅನುಚಾನ ಸಂಬಂಧದ ಆಶೀರ್ವಾದದ ನೆನಪಿಗಾಗಿ ೧೦೦೧.೦೦ ರೂ.ಗಳ ಗೌರವ ಕಾಣಿಕೆಯನ್ನು ಮಂದಿರದ ವತಿಯಿಂದ ಸಮರ್ಪಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ರಾ. ಅನಂತರಾಮುರವರು ಒಂದು ಪದ್ಯಮಾಲಿಕೆಯನ್ನು ಗುರುಗಳ ಸಮ್ಮುಖದಲ್ಲಿ ಪಠಣ ಮಾಡಿ ಸಮರ್ಪಿಸಿದರು. ಈ ಪದ್ಯಮಾಲಿಕೆಯನ್ನು **ಅನುಬಂಧ ೫** ರಲ್ಲಿ ವಾಚಕರ ಅವಗಾಹನೆಗಾಗಿ ನೀಡಲಾಗಿದೆ.

## ಶತಮಾನೋತ್ಸವ ಸಮಾರಂಭ

೧೯೯೦ರ ರಾಮೋತ್ಸವ ಮತ್ತು ಶತಮಾನೋತ್ಸವಗಳನ್ನು ಜೊತೆ ಜೊತೆಯಲ್ಲೇ ನಡೆಸಲಾಯಿತು. ಶ್ರೀ ಉಡುಪಿ ಕೃಷ್ಣಮಂದಿರದಲ್ಲಿ ಸ್ಥಳಾವಕಾಶ ಕೊಟ್ಟಿದ್ದರು. ಸಮಿತಿಯ ಸದಸ್ಯರಿಗೆ ಧನ್ಯವಾದಗಳು. ಶ್ರೀ ಶಿವಗಂಗಾ ಮಹಾಸ್ವಾಮಿಗಳ ಸಮ್ಮುಖದಲ್ಲಿ ಹೋಮ ಹವನಾದಿಗಳು ನೆರವೇರಿದವು.

ರಾಮೋತ್ಸವದ ಪ್ರಯುಕ್ತ ೧೯೯೦ರ ಏಪ್ರಿಲ್ ೧೮ ರಿಂದ ೨೨ರವರೆಗೆ ಶತಮಾನೋತ್ಸವವನ್ನು ಆಚರಿಸಲಾಯಿತು.

ಶತಮಾನೋತ್ಸವದ ಸವಿನೆನಪಿಗೆ ಸ್ಮರಣ ಸಂಚಿಕೆಯನ್ನು ಹೊರತರಲಾಗಿದೆ. ಶತಮಾನೋತ್ಸವ ಸಮಾರಂಭಕ್ಕೆ ಕೇಂದ್ರ ಸರ್ಕಾರದ ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದ ಶ್ರೀ ರಾಮಕೃಷ್ಣ ಹೆಗ್ಗಡೆಯವರು, ಶೃಂಗೇರಿ ಪೀಠಾಧಿಪತಿಗಳಾದ ಶ್ರೀ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರು, ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು, ಶ್ರೀ ಹರಿಹರಮಠದ ಶ್ರೀ ಶ್ರೀ ರಮಾನಂದ ಸರಸ್ವತಿಗಳು, ಇನ್ನೂ ಮುಂತಾದ ಗಣ್ಯರು ಶುಭ ಸಂದೇಶವನ್ನು ಕಳುಹಿಸಿಕೊಟ್ಟಿದ್ದಾರೆ.

ಈ ಶತಮಾನೋತ್ಸವದ ಸಲುವಾಗಿ ಒಂದು ಪ್ರತ್ಯೇಕ ಗೌರವ ಸದಸ್ಯರ ಸಮಿತಿಯನ್ನು ಏರ್ಪಾಡು ಮಾಡಲಾಯಿತು. ಇವರ ಹೆಸರುಗಳನ್ನು ಶತಮಾನೋತ್ಸವದ ಸ್ಮರಣ ಸಂಚಿಕೆಯಲ್ಲಿ ನೋಡಬಹುದು. **ಅನುಬಂಧ ೬** ರಲ್ಲಿ ವಾಚಕರ ಮಾಹಿತಿಗಾಗಿ ನೀಡಲಾಗಿದೆ.

ಶತಮಾನೋತ್ಸವ ಸ್ಮರಣ ಸಂಚಿಕೆಯಲ್ಲಿ ಮೊದಲನೇ ಬಾರಿಗೆ ಎಲ್ಲಾ ಪುದುವಟ್ಟುದಾರರ ಹೆಸರುಗಳನ್ನು ಮುದ್ರಿಸಲಾಗಿದೆ. ಮತ್ತು ವಿಶೇಷ ಸೇವಾರ್ಥದಾರರ ಹೆಸರುಗಳನ್ನು ಮುದ್ರಿಸಲಾಗಿದೆ. ಈ ಸ್ಮರಣ ಸಂಚಿಕೆಗೆ ಅನೇಕ ಧಾರ್ಮಿಕ ಲೇಖನಗಳನ್ನು ಕಳುಹಿಸಿರುತ್ತಾರೆ.

ಶ್ರೀಮತಿ ಲಲಿತಮ್ಮ ಸುಬ್ಬರಾವ್ ಅವರು ರೂ. ೧೦,೦೦೦.೦೦ ಶ್ರೀ ಎನ್.ಪಿ.ಶೇಠ್ ರೂ. ೫,೦೦೦.೦೦ ಡಾ. ಎನ್.ಶ್ರೀರಾಮ್ ೫,೦೦೦.೦೦ ಒಂಟಿಕೊಪ್ಪಲ್ ವೆಂಕಟರಮಣ ಸ್ವಾಮಿ ದೇವಸ್ಥಾನ ಸಮಿತಿಯವರು

ರೂ.೫,೦೦೦.೦೦ ಗಳನ್ನು ಕಟ್ಟಡಕ್ಕಾಗಿ ದಾನ ಮಾಡಿರುವವರಲ್ಲಿ ಪ್ರಮುಖರಾಗಿದ್ದು, ಈ ರೀತಿ ಅನೇಕ ಜನ ತಮ್ಮ ತಮ್ಮ ಶಕ್ತ್ಯಾನುಸಾರ ನೂರರಿಂದ ಪ್ರಾರಂಭಿಸಿ ಒಂದು ಸಾವಿರ ರೂಪಾಯಿಗಳವರೆಗೂ ದಾನ ಮಾಡಿರುತ್ತಾರೆ. ಇವರೆಲ್ಲರೂ ಶ್ರೀ ರಾಮಾಭ್ಯುದಯ ಸಭಾದ ಇತಿಹಾಸದಲ್ಲಿ ಸ್ತುತ್ಯರ್ಹರಾಗಿದ್ದಾರೆ. ಈ ಸಂದರ್ಭದಲ್ಲಿ ಡಾ. ಎನ್.ಶ್ರೀರಾಮ್‌ರವರು ಮಂದಿರಕ್ಕೆ ಧ್ವನಿವರ್ಧಕ ಸೆಟ್‌ಅನ್ನು ಮಂದಿರದ ಉಪಯೋಗಕ್ಕಾಗಿ ಕೊಟ್ಟಿದ್ದಾರೆ.

ಶ್ರೀಮತಿ ಕಮಲಾಬಾಯಿಯವರು ಶ್ರೀ ರಾಮಚಕ್ರವನ್ನು ಬೆಳ್ಳಿಯಲ್ಲಿ ಮಾಡಿಸಿ (ಸುಮಾರು ೧೦ ತೊಲ ತೂಕದ್ದು) ಮಂದಿರದಲ್ಲಿ ಪೂಜೆಗಾಗಿ ಕೊಟ್ಟಿರುತ್ತಾರೆ. ಇದೇ ರೀತಿ ಶ್ರೀ ಡಿ. ಕೇಸರಿಯವರು, ಬೆಳ್ಳಿಯ ಶ್ರೀ ಚಕ್ರವನ್ನು ಮಾಡಿಸಿ ಪೂಜೆಗಾಗಿ ೫೦೦.೦೦ ರೂಪಾಯಿಗಳ ಪುದುವಟ್ಟನ್ನು ಕೊಟ್ಟಿರುತ್ತಾರೆ. ಇವುಗಳನ್ನು ಇಂದಿಗೂ ಸಹಾ ಶಾಸ್ತ್ರೋಕ್ತವಾಗಿ ಪೂಜಿಸಲಾಗುತ್ತಿದೆ.

ಕೇಟರಿಂಗ್ ಕಂಟ್ರಾಕ್ಟರ್ ನಾಗೇಶ್ ಅವರು ಪಟ್ಟಾಭಿಷೇಕಕ್ಕೆ ಮುಫತ್ತಾಗಿ ಅಡಿಗೆ ಕೆಲಸವನ್ನು ಮಾಡಿ ಸೇವೆ ಸಲ್ಲಿಸಿರುತ್ತಾರೆ. ಶತಮಾನೋತ್ಸವ ಸಂಬಂಧದಲ್ಲಿ ಹೋಮ ಹವನಗಳು ನಡೆಸಲಾಯಿತು. ಅವುಗಳಲ್ಲಿ ಮುಖ್ಯವಾದವು ಗಣಪತಿ ಹೋಮ, ನವಗ್ರಹ ಹೋಮ, ಲಕ್ಷ್ಮೀನಾರಾಯಣ ಹೃದಯ ಹೋಮ, ರಾಮತಾರಕ ಹೋಮ, ಶ್ರೀ ರಾಮಪಟ್ಟಾಭಿಷೇಕದ ಹೋಮಗಳನ್ನು ನಡೆಸಲಾಯಿತು. ಇದಕ್ಕೆ ಮೈಸೂರು ನಗರ ಪ್ರಮುಖ ಉದ್ಯಮಿಗಳು, ಮಂದಿರದ ಅರ್ಚಕರಾದ ದಿವಂಗತ ಕೆ.ಎಸ್.ನಾರಾಯಣ್‌ರವರು ಹಾಗೂ ಆಸ್ತಿಕ ಮಹಾಶಯರುಗಳು ಸೇವಾರ್ಥದಾರರಾಗಿರುತ್ತಾರೆ.

ಮಹನೀಯರುಗಳಾದ ಶ್ರೀ ಡಿ.ನಾಗರಾಜ ಬಗರೆ, ಆಡಿಟರ್‌ರವರು ಗರ್ಭಾಂಕಣಕ್ಕೆ ಅಮೃತಶಿಲೆಯನ್ನು ಹಾಕಿಸಿರುತ್ತಾರೆ. ಜವಳಿ ಅಂಗಡಿ ನರಸಿಂಹಯ್ಯನವರು ಶಹಬಾದ್ ಫ್ಲೋರಿಂಗ್ ಟೈಲ್ಸ್ ಕೊಟ್ಟಿರುತ್ತಾರೆ. ಶ್ರೀ ಹೆಚ್.ಎನ್.ರಾಮತೀರ್ಥ, ಅರವಿಂದ ಪರಿಮಳ ವರ್ಕ್ಸ್‌ನ ಪಾಲುದಾರರು ಮಹಡಿ ಮೇಲಿನ ಶತಮಾನೋತ್ಸವ ಸಭಾಂಗಣವನ್ನು ಉದ್ಘಾಟಿಸಿದರು. ಗೃಹಪ್ರವೇಶ ಸಮಾರಂಭವನ್ನು ಹವನ, ಹೋಮ ಪ್ರಸಾದ ವಿನಿಯೋಗದಿಂದ ವಿಜೃಂಭಣೆಯಿಂದ ನೆರವೇರಿಸಲಾಯಿತು.

ಈ ಶತಮಾನೋತ್ಸವದ ಹವನ ಹೋಮಗಳು ವೈದಿಕ ವಿದ್ವಾಂಸರಾದ ವೇ.ಬ್ರ.ಶ್ರೀ ಕೃಷ್ಣಸ್ವಾಮಿ ಶಾಸ್ತ್ರಿಗಳು ಮತ್ತು ಅವತಿ ಸತ್ಯನಾರಾಯಣ ಶಾಸ್ತ್ರಿಗಳು ಇವರ ಆಚಾರ್ಯತ್ವದಲ್ಲಿ ಸಾಂಗವಾಗಿ ನೆರವೇರಿತು.

ವೈದಿಕ ಧರ್ಮ ಪರಿಪಾಲನೆಯ ಉತ್ತೇಜನಕ್ಕಾಗಿ ವೇದಪೋಷಿಣಿ ಸಭೆಗೆ ೨೦೦೦.೦೦ ರೂಗಳ ಎಂಡೋವ್‌ಮೆಂಟ್‌ನ್ನು ಸರ್ಕಾರದಲ್ಲಿಟ್ಟು ಬರುವ ಬಡ್ಡಿಯಿಂದ ಹೆಚ್ಚಿನ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ರೂಪದಲ್ಲಿ ಕೊಡುವ ಏರ್ಪಾಟು ಮಾಡಲಾಗಿದೆ. ಗಮಕ ವಿದ್ವಾನ್ ಮತ್ತು ಆಂಗ್ಲಭಾಷಾ ಪ್ರೊಫೆಸರ್ ಆದ ಶ್ರೀಯುತ ರಾ.ಅನಂತರಾಮು ಅವರು ಮತ್ತು ಗಮಕ ವಿದೂಷಿ ಶ್ರೀಮತಿ ಬಿ.ಹೆಚ್.ನಾಗರತ್ನಮ್ಮ ಪುರಾಣ ಪ್ರವಚನವನ್ನು ನಡೆಸಿಕೊಡುತ್ತಿದ್ದರು. ಶ್ರೀಮತಿ ನಾಗರತ್ನಮ್ಮನವರು ವಾಚನವನ್ನೂ, ಅನಂತರಾಮು ರವರು ವ್ಯಾಖ್ಯಾನವನ್ನು ಮನೋಜ್ಞವಾಗಿ ನಡೆಸಿಕೊಡುತ್ತಿದ್ದರು. ಇವರಿಬ್ಬರನ್ನೂ ಶತಮಾನೋತ್ಸವ ಸಮಾರಂಭದಲ್ಲಿ ಕ್ರಮವಾಗಿ ವಾಚನ ಕಲಾ ಕೋವಿದೆ ಹಾಗೂ ವ್ಯಾಖ್ಯಾನ ಪ್ರವೀಣ ಎಂದು ಬಿರುದು ನೀಡಿ ಗೌರವಿಸಿ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಸ್ಥಳೀಯ ದಿನಪತ್ರಿಕೆಯಲ್ಲಿ.....

**ತೈಲಚಿತ್ರ, ರಾಮನಿಗೆ ಶತಮಾನೋತ್ಸವ** ಎಂಬ ತಲೆಬರಹದಿಂದ ಪ್ರಕಟಣೆ ಮಾಡಿರುತ್ತಾರೆ. ಈ ಪತ್ರಿಕೆಯಲ್ಲಿ ನಮ್ಮ ಸಭೆಯ ಸಂಕ್ಷಿಪ್ತ ಇತಿಹಾಸವನ್ನು ತಿಳಿಸಿ, ಈ ತೈಲಚಿತ್ರವು ಒಂದು ನೂರು ವರ್ಷಗಳ ಹಳೆಯದೆಂದು ವರದಿಸಲಾಗಿದೆ. ಇದನ್ನು **ಅನುಬಂಧ ೭** ರಲ್ಲಿ ನೀಡಲಾಗಿದೆ.

ಶತಮಾನೋತ್ಸವದ ಮುಕ್ತಾಯ ಸಮಾರಂಭದಲ್ಲಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿದ್ದ ಶ್ರೀ ಸಿ.ಎನ್. ಅಶ್ವಥ್‌ನಾರಾಯಣರಾಯರು ಅಧ್ಯಕ್ಷತೆಯನ್ನು ವಹಿಸಿದ್ದರು. ಅಧ್ಯಕ್ಷರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಮಹಾಜನಗಳು, ರಾಮಾಭ್ಯುದಯ ಕಾರ್ಯಕಾರಿ ಮಂಡಳಿ ಮತ್ತು ಪದಾಧಿಕಾರಿಗಳ ಪರವಾಗಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರನ್ನು ಅಭಿನಂದಿಸಿ ಸನ್ಮಾನಿಸಿದರು.

೧೯೬೩-೬೪ರಲ್ಲಿ ಮಂದಿರದ ಉತ್ಸವ ಕಾರ್ಯಗಳಿಗೆ ಅಗತ್ಯವಾಗಿದ್ದ ಒಂದು ಚಿಕ್ಕ ರಥವನ್ನು ರೂ. ೧೦,೦೦೦.೦೦ ಖರ್ಚು ಮಾಡಿ ತಯಾರಿಸಲಾಯಿತು. ಈ ಕೆಲಸಕ್ಕೆ ಸಹಾಯ ಮಾಡಿದ ಮಹನೀಯರೆಂದರೆ, ಶ್ರೀ ಕೆ.ಎಸ್. ನಾರಾಯಣ್‌ರವರು, ಡಾ. ಎನ್.ಶ್ರೀರಾಮ್‌ರವರು, ಭಗವಾನ್ ಪೆಥಾಲಜಿ ಲ್ಯಾಬ್, ವಿ.ಎಲ್. ರಾಮಚಂದ್ರರಾವ್, ಡಿ. ನಾಗರಾಜ್ ಬಗರೆ ಆಡಿಟರ್, ಆರ್. ಗುರು ಸೈಕಲ್‌ಬ್ರಾಂಡ್ ಅಗರಬತ್ತಿ ಕಾರ್ಖಾನೆ ಮಾಲೀಕರು, ವಿ.ಎಸ್. ಶ್ರೀಕಂಠಶಾಸ್ತ್ರಿಗಳು ಹಾಗೂ ಮಹಾಜನಗಳು. ಇದೇ ರಥವನ್ನು ಈಗ ರಥದ ಮೂಲ ಸ್ವರೂಪಕ್ಕೆ ಚ್ಯುತಿಬರದಂತೆ ಶೆಣೈ ಇಂಜಿನಿಯರಿಂಗ್ ವರ್ಕ್ಸ್‌ನ ಶೆಣೈರವರು ಮಾರ್ಪಡಿಸಿಕೊಟ್ಟಿರುತ್ತಾರೆ. ಈ ರಥವನ್ನು ಹನುಮಂತ್ರೋವ ಹಾಗೂ ಶಂಕರಜಯಂತಿ ಉತ್ಸವಗಳಲ್ಲಿ ಉಪಯೋಗಿಸಿಕೊಳ್ಳಲಾಗುತ್ತಿದೆ.

## ಸಾಮ್ರಾಜ್ಯ ಪಟ್ಟಾಭಿಷೇಕ ಮಹೋತ್ಸವ

೧೯೭೫ರಲ್ಲಿ ರಾಮೋತ್ಸವದ ಜೊತೆಯಲ್ಲೇ ಸಾಮ್ರಾಜ್ಯ ಪಟ್ಟಾಭಿಷೇಕ ಮಹೋತ್ಸವವು ನಡೆಯಿತು. ಅಂದರೆ ಯುವ ನಾಮ ಸಂವತ್ಸರ, ಚೈತ್ರಶುದ್ಧ ನವಮಿ ದಿನಾಂಕ ೧೭.೦೪.೧೯೭೫ ರಿಂದ ಚೈತ್ರಬಹುಳ ಪಾಡ್ಯಮಿಯವರೆಗೆ ದಿನಾಂಕ ೨೨.೦೪.೧೯೭೫ರವರೆಗೆ ಬಹು ವಿಜೃಂಭಣೆಯಿಂದ ನೆರವೇರಿಸಲಾಯಿತು. ಇದೊಂದು ರಾಮಮಂದಿರದ ಇತಿಹಾಸದಲ್ಲೇ ಮರೆಯಲಾಗದ ಅಭೂತಪೂರ್ವ ಕಾರ್ಯಕ್ರಮವಾಗಿ ರೂಪುಗೊಂಡು ಜನಮನದಲ್ಲಿ ಶಾಶ್ವತವಾಗಿ ನೆಲೆಯೂರಿದೆ.

**ಪ್ರೇರಣೆ :**

ಸುಮಾರು ಜುಲೈ ೧೯೭೪ರಲ್ಲಿ ಶ್ರೀ ಶ್ರೀ ಶ್ರೀ ಶೃಂಗೇರಿ ಕೂಡಲಿಸ್ವಾಮಿಗಳು ಈ ಮಂದಿರದ ಸಮೀಪದಲ್ಲಿರುವ ಸರಸ್ವತಿ ಯೂನಿಯನ್ ಎಂಬ ವಿದ್ಯಾಸಂಸ್ಥೆಗೆ ಆಹ್ವಾನದ ಮೇಲೆ ಆಗಮಿಸಿದ್ದರು. ಆ ಸಂಸ್ಥೆಯವರ ಕೋರಿಕೆಯಂತೆ ಪೀಠಾಧೀಶರನ್ನು ಗೌರವಪೂರ್ವಕವಾಗಿ ಪೂರ್ಣಕುಂಭ ಮತ್ತು ವಾದ್ಯಗಳೊಡನೆ ಬರಮಾಡಿಕೊಳ್ಳಬೇಕಾದ ಕಾರಣ ತಕ್ಕ ಏರ್ಪಾಟು ಮಾಡಿಕೊಳ್ಳುವ ಅಗತ್ಯವಿದೆ. ಆದುದರಿಂದ ಸ್ವಲ್ಪ ಕಾಲ ಗುರುಗಳನ್ನು ನಾವು ಕರೆದುಕೊಂಡು ಹೋಗುವವರೆಗೂ ತಮ್ಮ ಮಂದಿರದಲ್ಲಿ ವಿಶ್ರಮಿಸಿಕೊಳ್ಳಲು ಅವಕಾಶ ಮಾಡಿಕೊಡಬೇಕಾಗಿ ಕೇಳಿಕೊಂಡರು. ಅದರಂತೆ ಸ್ವಾಮಿಗಳು ನಮ್ಮ ಮಂದಿರದಲ್ಲಿ ಉಳಿದರು. ಆಗ ರಾಮ ಮಂದಿರದ ನೂರು ವರ್ಷದ ಇತಿಹಾಸವನ್ನು ಕೇಳಿ ಬಹಳ ಸಂತಸಪಟ್ಟು, ನೀವು ಅತ್ಯವಶ್ಯಕವಾಗಿ ಶ್ರೀ ರಾಮ ಸಾಮ್ರಾಜ್ಯ ಪಟ್ಟಾಭಿಷೇಕವನ್ನು ನೆರವೇರಿಸಲೇಬೇಕೆಂದು ಆದೇಶ ನೀಡಿದರು. ಈ ಮಹನೀಯರ ಆದೇಶವನ್ನು

ಶಿರಸಾವಹಿಸಿದ ಸಮಿತಿಯವರು ರಾಮೋತ್ಸವದ ಜೊತೆಯಲ್ಲೇ ಸಾಮ್ರಾಜ್ಯ ಪಟ್ಟಾಭಿಷೇಕವನ್ನೂ ನಡೆಸಲು ನಿರ್ಧರಿಸಿದರು. ಈ ತೀರ್ಮಾನದ ಫಲವಾಗಿ ದಿನಾಂಕ ೧೫.೦೮.೧೯೯೪ ರಲ್ಲಿ ಸಾರ್ವಜನಿಕರಲ್ಲಿ ಒಂದು ಮನವಿ ಮಾಡಿಕೊಂಡರು. ( ಪೂಜ್ಯರಾದ ಶ್ರೀ ವಿದ್ಯಾಭಿನವ ವಿದ್ಯಾರಣ್ಯಭಾರತೀ ಸ್ವಾಮಿಗಳು ಹಾಗೂ ಶ್ರೀ ಶ್ರೀ ಕೂಡಲೀ ಶೃಂಗೇರಿ ಮಹಾಸ್ವಾಮಿಗಳು)

ಅದರಂತೆ ಸಮಾರಂಭವು ೦೯.೦೪.೧೯೯೫ ರಿಂದ ೨೩.೦೪.೧೯೯೫ ರವರೆಗ ೧೫ ದಿವಸಗಳ ಪರ್ಯಂತ ಬಹುವಿಜೃಂಭಣೆಯಿಂದ ಜರುಗಿತು. ವಿನೋಭ ರಸ್ತೆಯಲ್ಲಿರುವ ಧರ್ಮಪರಾಯಣೆ ಶ್ರೀಮತಿ ಆಲಮ್ಮನವರ ಛತ್ರದಲ್ಲಿ ಸಾಮ್ರಾಜ್ಯಪಟ್ಟಾಭಿಷೇಕದ ಕಾರ್ಯಕ್ರಮಗಳು ನಡೆಯಿತು. ಕುಂಚಿಟಿಗರ ಛತ್ರದ ಅಧ್ಯಕ್ಷರಾದ ಶ್ರೀ ರಾಗಿಮಂಡಿ ವಸಂತು ಮತ್ತು ಗೌರವ ಕಾರ್ಯದರ್ಶಿಗಳಾದ ಶ್ರೀ ಬಿ.ಚೆನ್ನಕೇಶವಯ್ಯನವರು ಬಹಳ ಶ್ರದ್ಧಾಭಕ್ತಿಗಳಿಂದ ಕಮಿಟಿ ಸದಸ್ಯರನ್ನು ಒಪ್ಪಿಸಿ, ಶ್ರೀರಾಮ ಸಾಮ್ರಾಜ್ಯ ಪಟ್ಟಾಭಿಷೇಕದ ಸಲುವಾಗಿ ಎಲ್ಲಾ ಸೌಕರ್ಯಗಳನ್ನೊಳಗೊಂಡಂತೆ ಮುಫತ್ತಾಗಿ ಛತ್ರವನ್ನು ಬಿಡಿಸಿಕೊಟ್ಟಿರುತ್ತಾರೆ. ಕುಂಚಿಟಿಗರ ಜನಾಂಗದ ಆಡಳಿತಾಧಿಕಾರಿಗಳು ವಿಶೇಷವಾಗಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಿಗೆ ಅನಂತ ಧನ್ಯವಾದಗಳು.

ದಿನಾಂಕ ೦೯.೦೪.೧೯೯೫ ರಿಂದ ಶ್ರೀರಾಮನವಮಿ ರಾಮೋತ್ಸವವು ದಿನಾಂಕ ೧೬.೦೪.೧೯೯೫ ರಿಂದ ೨೩.೦೪.೧೯೯೫ ರವರೆಗೆ ಸಾಮ್ರಾಜ್ಯ ಪಟ್ಟಾಭಿಷೇಕದ ಕಾರ್ಯಕ್ರಮಗಳು ಬಹಳ ವಿಜೃಂಭಣೆಯಿಂದ ನೆರವೇರಿಸಲಾಯಿತು.

## ಸಾಮ್ರಾಜ್ಯ ಪಟ್ಟಾಭಿಷೇಕದ ಕಾರ್ಯಕ್ರಮಗಳ ವರದಿ

ದಿನಾಂಕ ೧೬.೦೪.೧೯೯೫ ರಿಂದ ಗೋಪೂಜಾ ಪುರಸ್ಸರವಾಗಿ ಶ್ರೀರಾಮಚಂದ್ರ ಸ್ವಾಮಿಯ ಮೂರ್ತಿಯನ್ನು ಮಂಗಳವಾದ್ಯ, ಮಂಗಳ ದ್ರವ್ಯ ಮತ್ತು ಕಳಶದೊಂದಿಗೆ ಮೆರವಣಿಗೆಯಲ್ಲಿ ಉತ್ಸವವನ್ನು ಯಾಗ ಮಂಟಪಕ್ಕೆ ಬರಮಾಡಿಕೊಳ್ಳಲಾಯಿತು. ಯಾಗ ಮಂಟಪ ಪ್ರವೇಶವಾದ ಮೇಲೆ ಸ್ವಾಮಿಯನ್ನು ಸ್ಥಾಪನೆ ಮಾಡಲಾಯಿತು. ಋತ್ವಿಕ್, ವರುಣ ಕಳಶ ಸ್ಥಾಪನೆ, ಮಂಟಪ ಪೂಜೆ, ಪುಣ್ಯಾಹ ಇತ್ಯಾದಿ ಧಾರ್ಮಿಕ ವಿಧಿಗಳೆಲ್ಲವೂ ಶಾಸ್ತ್ರೋಕ್ತವಾಗಿ ನೆರವೇರಿದವು.

## ಹೋಮಗಳ ವಿವರ

ಸಾಮ್ರಾಜ್ಯಪಟ್ಟಾಭಿಷೇಕದ ಅಂಗವಾಗಿ ಮೊಟ್ಟಮೊದಲಿಗೆ ಶ್ರೀ ಮಹಾಗಣಪತಿ ಹೋಮ ನೆರವೇರಿತು. ನಂತರ ನವಗ್ರಹ ಹೋಮ, ಗಾಯತ್ರಿ ಹೋಮ, ಲಕ್ಷ್ಮೀನಾರಾಯಣ ಹೃದಯ ಹೋಮ, ರುದ್ರ ಹೋಮ, ಚಂಡಿ ಹೋಮ, ರಾಮತಾರಕ ಹೋಮ, ಶ್ರೀರಾಮ ಪಟ್ಟಾಭಿಷೇಕ ಹೋಮ ಮತ್ತು ಸಾಮ್ರಾಜ್ಯ ಪಟ್ಟಾಭಿಷೇಕ ಹೋಮಗಳನ್ನು ನಡೆಸಲಾಯಿತು. ಇವುಗಳ ಸೇವಾರ್ಥದಾರರ ವಿವರ <u>ಅನುಬಂಧ ೮</u> ರಲ್ಲಿ ನೀಡಲಾಗಿದೆ.

ಈ ಹೋಮಗಳ ಆಚಾರ್ಯತ್ವವನ್ನು ಶ್ರೀಮಾನ್ ವೇ.ಬ್ರ.ಶ್ರೀ ಕೃಷ್ಣಸ್ವಾಮಿ ಶಾಸ್ತ್ರಿಗಳು ಮತ್ತು ಮಂದಿರದ ಅರ್ಚಕರಾದ ವೇ.ಬ್ರ.ಶ್ರೀ ಸತ್ಯನಾರಾಯಣ ಶಾಸ್ತ್ರಿಗಳು ವಹಿಸಿದ್ದರು. ಈ ಹಿಂದೆಯೇ ತಿಳಿಸಿರುವಂತೆ ಶ್ರೀಮತಿ

ಆಲಮ್ಮನವರ ಛತ್ರದಲ್ಲಿ ವಿಶಾಲವಾದ ಬಯಲು ಪ್ರದೇಶ ಸುಮಾರು ೫೦೦ ಅಡಿ ಉದ್ದ ೭೦ ಅಡಿ ಅಗಲದ ಸ್ಥಳದಲ್ಲಿ ಚಪ್ಪರವನ್ನು ಹಾಕಿಸಲಾಗಿತ್ತು. ಐದು ಹೋಮ ಕುಂಡಗಳನ್ನು ನಿರ್ಮಿಸಲಾಗಿತ್ತು. ೭೦ ಜನ ಋತ್ವಿಕರು ನವಗ್ರಹ ಜಪ, ರಾಮಾಯಣ ಪಾರಾಯಣ, ಸೂರ್ಯ ನಮಸ್ಕಾರ, ತರ್ಪಣಾಧಿಗಳು ಮತ್ತು ಹೋಮಗಳನ್ನು ನಡೆಸಿದರು.

ಪ್ರತಿದಿನ ಸಾಯಂಕಾಲ ವಿದ್ವಾಂಸರುಗಳಿಂದ ಉಪನ್ಯಾಸ, ಸಂಗೀತ, ಹರಿಕಥೆ, ವೈದಿಕರಿಂದ ಅಷ್ಟಾವಧಾನ ಸೇವೆ ಮತ್ತು ರಾಷ್ಟ್ರಾಶೀರ್ವಾದ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಮಹಾಜನಗಳ ಪರವಾಗಿ ಸಾಮೂಹಿಕ ಸತ್ಯನಾರಾಯಣ ಪೂಜೆ ಮತ್ತು ಸೀತಾ ಕಲ್ಯಾಣವನ್ನು ಬಹುವಿಜೃಂಭಣೆಯಿಂದ ನಡೆಸಲಾಯಿತು.

ಶ್ರೀ ರಾಮೋತ್ಸವ ಮತ್ತು ಸಾಮ್ರಾಜ್ಯ ಪಟ್ಟಾಭಿಷೇಕದ ದಿನಗಳಲ್ಲಿ ಋತ್ವಿಕರ ವಸತಿ, ಊಟ, ಉಪಹಾರ ಇತ್ಯಾದಿಗಳನ್ನು ಸ್ವಲ್ಪವೂ ಚ್ಯುತಿಬಾರದಂತೆ ವ್ಯವಸ್ಥೆ ಮಾಡಲಾಯಿತು.

ಸಾಮ್ರಾಜ್ಯ ಪಟ್ಟಾಭಿಷೇಕದ ಹೋಮದ ದಿನಗಳಲ್ಲಿ ಕೆಳಕಂಡ ಶ್ರೀ ಶ್ರೀ ಪೀಠಾಧೀಶರುಗಳನ್ನು ವಿಶೇಷವಾಗಿ ಆಹ್ವಾನಿಸಲಾಗಿತ್ತು. ಅವರ ಸಮಕ್ಷಮದಲ್ಲಿ ಪೂರ್ಣಾಹುತಿ ನೆರವೇರಿತು. ಸಮಾರಂಭದ ಪೂರ್ತಿ ಶ್ರೀ ಶ್ರೀ ಹರಿಹರಾನಂದ ಸ್ವಾಮಿಗಳು ಉಪಸ್ಥಿತರಿದ್ದರು. ಶ್ರೀ ಶ್ರೀ ಹೆಬ್ಬೂರಿನ ಮಠಾಧೀಶರಾದ ನಾರಾಯಣ ಆಶ್ರಮದ ಸ್ವಾಮಿಗಳು, ಪರ್ಯಾಯ ಶ್ರೀ ಶ್ರೀ ಚಂದ್ರಶೇಖರಾನಂದ ಸ್ವಾಮಿಗಳು, ಶ್ರೀ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳು ಉಪಸ್ಥಿತರಿದ್ದರು. ಸಾಮ್ರಾಜ್ಯ ಪಟ್ಟಾಭಿಷೇಕದ ದಿನ ಪೂರ್ಣಾಹುತಿಯು ಶ್ರೀ ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಠದ ಸ್ವಾಮಿಗಳ ಉಪಸ್ಥಿತಿಯಲ್ಲಿ ನೆರವೇರಿತು.

ಶ್ರೀಮತಿ ಆಲಮ್ಮನವರ ಛತ್ರವನ್ನು ಸಮಾರಂಭಕ್ಕಾಗಿ ಉಚಿತವಾಗಿ ನೀಡಿರುವುದರಿಂದ ಮೊದಲನೇ ಪೂಜೆ ಮತ್ತು ಹೋಮವನ್ನು ಕುಂಚಿಟಿಗರ ಸಂಘದ ಪರವಾಗಿ ನಡೆಸಲಾಯಿತು. ಸಾಮ್ರಾಜ್ಯ ಪಟ್ಟಾಭಿಷೇಕ ಸಮಾರಂಭ ನಿರ್ವಹಣೆ ಸಲುವಾಗಿ ಒಂದು ಪ್ರತ್ಯೇಕ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿ ಶ್ರೀ ರಾಮಾಭ್ಯುದಯ ಸಭಾ ಕಾರ್ಯಕಾರಿ ಸಮಿತಿ ಸದಸ್ಯರ ಸಹಕಾರದೊಂದಿಗೆ, ಕಾರ್ಯನೆರವೇರಿಸುವುದೆಂದು ತೀರ್ಮಾನಿಸಲಾಯಿತು. ಸಾಮ್ರಾಜ್ಯ ಪಟ್ಟಾಭಿಷೇಕ ನಿರ್ವಹಣಾ ಸಮಿತಿಯ ವಿವರ <u>ಅನುಬಂಧ ೯</u> ರಲ್ಲಿ ವಾಚಕರ ಮಾಹಿತಿಗಾಗಿ ನೀಡಲಾಗಿದೆ.

ಶ್ರೀ ರಾಮಸಾಮ್ರಾಜ್ಯ ಪಟ್ಟಾಭಿಷೇಕ ಸಮಾರಂಭದ ಸವಿನೆನಪಿಗಾಗಿ ಒಂದು ಸ್ಮರಣ ಸಂಚಿಕೆಯನ್ನು ಹೊರತರಲಾಗಿದೆ. ಶ್ರೀ ಶ್ರೀ ಜಗದ್ಗುರು ಭಾರತಿ ತೀರ್ಥ ಸ್ವಾಮಿಗಳು ಆಶೀರ್ವಾದ ಪೂರ್ವಕ ಅನುಗ್ರಹ ಸಂದೇಶವನ್ನು ಕಳುಹಿಸಿರುತ್ತಾರೆ. ಶ್ರೀ ಶ್ರೀ ಕೂಡಲೀ ಮಠಾಧೀಶಸ್ವಾಮೀಜಿಯವರೂ ಸಹ ಸಂದೇಶ ಕಳುಹಿಸಿರುತ್ತಾರೆ. ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆ, ಬಿ.ಜೆ.ಪಿ. ಧುರೀಣರಾದ ಶ್ರೀ ಎಲ್.ಕೆ. ಅಡ್ವಾಣಿಯವರು ಸಹ ಶುಭ ಸಂದೇಶಗಳನ್ನು ಕಳುಹಿಸಿರುತ್ತಾರೆ. ಲೇಖನಗಳನ್ನು ಸ್ಮರಣ ಸಂಚಿಕೆಯಲ್ಲಿ ನೀಡಲಾಗಿದೆ. ಲೇಖನಗಳು ಹೊರತರಲು ಸಹಕರಿಸಿದ ಸಾಂಸ್ಕೃತಿಕ ವಿದ್ವಾಂಸರು ಹಾಗೂ ಗಣ್ಯ ಮಹನೀಯರುಗಳಿಗೆ ಸಭೆಯು ಅಭಾರಿಯಾಗಿದೆ.

ಶ್ರೀ ಹೆಚ್.ಎನ್.ರಾಮತೀರ್ಥರವರು ಶ್ರದ್ಧಾಪೂರ್ವಕ ಧನ ಸಂಗ್ರಹಣೆಗೆ, ಕಾರ್ಯದರ್ಶಿ ಶ್ರೀ ವಿ.ಎಸ್.ಶ್ರೀಕಂಠಶಾಸ್ತ್ರಿಗಳನ್ನು ಮತ್ತು ಎಸ್.ವಿಶ್ವನಾಥರಾಯರನ್ನು ಬೆಂಗಳೂರು, ಶಿವಮೊಗ್ಗ, ಮೊದಲಾದ ಸ್ಥಳಗಳಿಗೆ ಸ್ವತಃ ತಾವೇ ಕರೆದೊಯ್ದಿದ್ದರು. ಅವರ ಗೀತಾ ಉಪನ್ಯಾಸದ ಸಂಭಾವನೆಯನ್ನೂ ಸಹಾ ಮಂದಿರಕ್ಕೆ ಸಲ್ಲಿಸಿರುತ್ತಾರೆ. ಮೈಸೂರಿನಲ್ಲಿ ಗಣ್ಯವ್ಯಕ್ತಿಗಳನ್ನು ಸಂದರ್ಶಿಸಿ ದ್ರವ್ಯ ಸಂಗ್ರಹಣೆ ನಡೆಸಿರುತ್ತಾರೆ. ಶ್ರೀ ಡಿ. ನಾಗರಾಜು ಬಗರೆಯವರು ವೈಯಕ್ತಿಕವಾಗಿ ಕಾರ್ಯದರ್ಶಿಯನ್ನು ಜೊತೆಗೂಡಿ ಅನೇಕ ಗಣ್ಯ ವ್ಯಕ್ತಿಗಳಿಂದ ಸೇವಾರ್ಥಗಳನ್ನು ನೋಂದಾಯಿಸಿರುತ್ತಾರೆ.

ಬಹಳ ಸ್ತುತ್ಯರ್ಹವಾದ ಸಂಗತಿಯೆಂದರೆ, ಮಂದಿರದ ಅರ್ಚಕರಾದ ಶ್ರೀ ಕೆ.ಎಸ್.ನಾರಾಯಣ್‌ರವರು, ಅವರ ಪೌರಹಿತ್ಯದಲ್ಲಿ ಗೃಹಸ್ಥರಿಂದ ಗಣನೀಯ ಸೇವಾರ್ಥ ( ದ್ರವ್ಯ ) ಸಂಗ್ರಹಣೆ ಮಾಡಿರುತ್ತಾರಲ್ಲದೆ, ಸ್ವಪೌರೋಹಿತ್ಯದ ಸಂಭಾವನೆಯ ಸಂಪಾದನೆಯನ್ನು ( ಮಂದಿರದಲ್ಲಿ ಬೀರುವಿನಲ್ಲಿ ಕೂಡಿಟ್ಟಿದ್ದು) ಸುಮಾರು ೨೧,೦೦೦.೦೦ ರೂಪಾಯಿಗಳನ್ನು ಸಾಮ್ರಾಜ್ಯ ಪಟ್ಟಾಭಿಷೇಕಕ್ಕಾಗಿ ದೇಣಿಗೆ ನೀಡಿದ್ದಾರೆ. ಅಲ್ಲದೆ ಸ್ವತಃ ಹೋಮ ಹವನಾದಿ ಸೇವಾರ್ಥಗಳನ್ನು ಪ್ರತ್ಯೇಕವಾಗಿ ನಡೆಸಿಕೊಟ್ಟಿರುತ್ತಾರೆ.

ಸಾಮ್ರಾಜ್ಯ ಪಟ್ಟಾಭಿಷೇಕದ ಯಶಸ್ಸಿಗೆ ಕಾರಣೀಭೂತರಾದಂತಹ ಹೆಚ್.ಎನ್. ರಾಮತೀರ್ಥ, ರಾಗಿಮಂಡಿ ವಸಂತು, ಆಲಮ್ಮನವರ ಛತ್ರದ ಗೌರವ ಕಾರ್ಯದರ್ಶಿ ಬಿ. ಚನ್ನಕೇಶವಯ್ಯ ಹಾಗೂ ಮಂದಿರದ ಅರ್ಚಕರಾದಂತಹ ಶ್ರೀ ಕೆ.ಎಸ್. ನಾರಾಯಣ್ ಇವರುಗಳನ್ನು ಶ್ರೀ ರಾಮದೇವರಿರುವ ಡಾಲರ್‌ಗಳನ್ನು ನೀಡಿ ಸನ್ಮಾನಿಸಲಾಗಿದೆ. ಅಲ್ಲದೆ ೫,೦೦೦.೦೦ ರೂ. ಕೊಟ್ಟು ಹವನ ಹೋಮಗಳ ಸೇವೆ ನಡೆಸಿದವರಿಗೆ ಶಾಲು ಹೊದಿಸಿ ಸನ್ಮಾನಿಸಲಾಯಿತು.

ಈ ಸಾಮ್ರಾಜ್ಯ ಪಟ್ಟಾಭಿಷೇಕಕ್ಕೆ ಇನ್ನೂ ಅನೇಕರು ಧನ, ಧಾನ್ಯರೂಪದಲ್ಲಿ ಸಹಾಯ ಮಾಡಿರುತ್ತಾರೆ. ವಿವರಗಳನ್ನು ಸಾಮ್ರಾಜ್ಯ ಪಟ್ಟಾಭಿಷೇಕದ ಸ್ಮರಣ ಸಂಚಿಕೆಯಲ್ಲಿ ನೀಡಲಾಗಿದೆ.

ಸಾಮ್ರಾಜ್ಯ ಪಟ್ಟಾಭಿಷೇಕ ಸಮಿತಿ ಹಾಗೂ ರಾಮಾಭ್ಯುದಯ ಸಭೆಯ ಸದಸ್ಯರ ಫೋಟೋಗಳನ್ನು <u>ಅನುಬಂಧ ೧೦</u> ರಲ್ಲಿ ನೀಡಲಾಗಿದೆ.

ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮಹಿಳಾ ಸಂಘಗಳಿಂದ ಸೀತಾ ಕಲ್ಯಾಣ ರೂಪಕವು ವಿಶೇಷವಾಗಿ ಸಿ.ಎಲ್.ರಾಮಚಂದ್ರರಾಯರ ಧರ್ಮಪತ್ನಿಯವರ ನೇತೃತ್ವದಲ್ಲಿ ನಡೆದು ಎಲ್ಲರ ಮೆಚ್ಚುಗೆ ಪಡೆಯಿತು. ಪಟ್ಟಾಭೀಷೇಕದ ಅಂತಿಮ ದಿನ ಋತ್ವಿಕರುಗಳಿಗೆ ಸಂಭಾವನೆ ನೀಡಿ ಗೌರವಿಸಲಾಯಿತು ಮತ್ತು ಗಣ್ಯವ್ಯಕ್ತಿಗಳ ಸನ್ಮಾನ ಕಾರ್ಯಕ್ರಮ ನಡೆಯಿತು. ದಿನಾಂಕ ೨೫.೦೪.೧೯೫೫ರ ಪಟ್ಟಾಭಿಷೇಕದ ದಿನ ನಂಜರಾಜಬಹದ್ದೂರು ಛತ್ರದಲ್ಲಿ ಸುಮಾರು ೮೦೦೦ ಜನರಿಗೆ ಪ್ರಸಾದ ರೂಪದಲ್ಲಿ ಸಮಾರಾಧನೆಯನ್ನು ಏರ್ಪಡಿಸಲಾಗಿತ್ತು.

ಒಟ್ಟಾರೆ ಈ ಸಾಮ್ರಾಜ್ಯ ಪಟ್ಟಾಭಿಷೇಕ ಜನ ಮನ್ನಣೆ ಪಡೆದು ಶ್ರೀ ರಾಮಾಭ್ಯುದಯ ಸಭಾದ ಇತಿಹಾಸದಲ್ಲೇ ಮರೆಯಲಾಗದ ಅವಿಸ್ಮರಣೀಯ ಕಾರ್ಯಕ್ರಮವಾಯಿತು.

ದಿನಾಂಕ ೨೦.೦೮.೧೯೫೫ರಲ್ಲಿ ಐದನೇ ಮಹಾಸಭೆ ನಡೆಯಿತು.

## <u>ಮಂದಿರದ ವಿಶೇಷ ವಿಷಯಗಳು</u>

ರಾಮ ಮಂದಿರದಲ್ಲಿ ನಿತ್ಯವೂ ಅಭಿಷೇಕ, ಅರ್ಚನೆಗಳು ಎರಡೂ ಹೊತ್ತು ನಡೆಯುತ್ತಿದೆ. ಪುದುವಟ್ಟು ಸೇವಾರ್ಥಗಳ ಸೇವೆಗಳು ಎಲ್ಲರ ಅನುಕೂಲದ ದೃಷ್ಟಿಯಲ್ಲಿ ಸಾಯಂಕಾಲ ನಡೆಯುತ್ತಿದೆ. ಸೇವಾರ್ಥಿಗಳಿಗೆ ಮುಂಚಿತವಾಗಿಯೇ ಅಂಚೆಯ ಮೂಲಕ ಮಾಹಿತಿ ನೀಡಲಾಗುತ್ತಿದೆ. ಸೇವಾರ್ಥಿಗಳು ಹಾಜರಾಗದಿದ್ದಲ್ಲಿ ಕುಂಕುಮ ಮತ್ತು ಸಕ್ಕರೆ ಪ್ರಸಾದ ರೂಪದಲ್ಲಿ ಅಂಚೆಯ ಮೂಲಕ ತಲುಪಿಸಲಾಗುತ್ತಿತ್ತು. ಆದರೆ, ೧೩.೧೦.೨೦೦೩ ರಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ, ತೆಗೆದುಕೊಂಡ ತೀರ್ಮಾನದಂತೆ, ಇತ್ತೀಚಿಗೆ ಅಂಚೆ ವೆಚ್ಚ ದುಬಾರಿಯಾಗಿ ಬ್ಯಾಂಕ್ ಬಡ್ಡಿ ದರದಲ್ಲಿ ಗಣನೀಯ ಇಳಿಮುಖವಾಗಿರುವುದರಿಂದ ಪುದುವಟ್ಟುದಾರರಿಗೆ ಪ್ರಸಾದ ಕಳುಹಿಸುವ ಪದ್ದತಿಯನ್ನು ಕೈ ಬಿಡಲಾಗಿದೆ. ಆದರೆ ಅವರು ನಿಗದಿಪಡಿಸಿದ ದಿನದಂದು ಪೂಜೆಯನ್ನು ನೆರವೇರಿಸಲಾಗುತ್ತದೆ. ಈ ಬಗ್ಗೆ ಪೂಜೆ ನಡೆದುದಕ್ಕೆ ಅಂಚೆ ಮೂಲಕ ಮಾಹಿತಿ ರವಾನಿಸಲಾಗುತ್ತಿದೆ.

೧೯೬೩ಕ್ಕೆ ಮುಂಚೆ ಪುದುವಟ್ಟು ಪೂಜೆಯ ಸೇವಾರ್ಥದಾರರ ಸಂಖ್ಯೆ ಸುಮಾರು ೨೦೦ ಕ್ಕೂ ಕಡಿಮೆ ಇದ್ದು ಕ್ರಮೇಣ ೫೦೦ ಸಂಖ್ಯೆಗೆ ಹೆಚ್ಚಿದೆ. ಕ್ರಮೇಣ ೧೯೯೦ ಶತಮಾನೋತ್ಸವ ಕಾಲಕ್ಕೆ ಇನ್ನೂ ಹೆಚ್ಚಾಗಿದೆ. ೧೯೯೫ ರ ಸಾಮ್ರಾಜ್ಯ ಪಟ್ಟಾಭಿಷೇಕದಲ್ಲಿ ಮತ್ತು ಏರಿಕೆಯಾಗಿದೆ. ಮಂದಿರವು ೧೯೯೫ ರಿಂದಲೂ ಆರ್ಥಿಕ ಭದ್ರತೆಯನ್ನು ಹೊಂದಿದೆ. ವಿನಾಯಕ ಚೌತಿ ದಿನ ವರಸಿದ್ದಿ ವಿನಾಯಕವನ್ನು ಪ್ರತಿಷ್ಠಾಪಿಸಿ, ಪೂಜಿಸಿ, ೨೧ನೇ ದಿವಸ ವಿಸರ್ಜನೆ ಮಾಡಲಾಗುತ್ತಿದೆ. ಮಹಿಳೆಯರು, ಪುರುಷರು, ಉತ್ಸವದಲ್ಲಿ ಭಾಗವಹಿಸಿ ಪ್ರಸಾದವನ್ನು ಸ್ವೀಕರಿಸಿರುತ್ತಾರೆ.

ರಾಮೋತ್ಸವ ಸಮಾರಂಭಗಳಲ್ಲದೆ ವಿನಾಯಕ ಚೌತಿ, ಶಂಕರ ಜಯಂತಿ, ಸದಾಶಿವ ಬ್ರಹ್ಮೇಂದ್ರರ ಆರಾಧನೆ, ನವರಾತ್ರಿಯ ೧೦ ದಿನಗಳ ಕುಂಕುಮಾರ್ಚನೆ ಇವೆಲ್ಲವೂ ಇಂದಿಗೂ ನಡೆಯುತ್ತಿದೆ. ಸುಮಾರು ೧೯೫೫.೫೬ರವರೆಗೆ ಶಂಕರ ಜಯಂತ್ಯುತ್ಸವ ಪೇಟೆ ಬೀದಿಗಳಲ್ಲಿ ಬಂದು ಮನೆ ಮನೆಗಳಲ್ಲಿ ಮಂಟಪೋತ್ಸವ ಪೂಜೆ ಸ್ವೀಕರಿಸಿ ಇಲವಾಲ ರಸ್ತೆಯಲ್ಲಿದ್ದ ದಿ. ಶ್ರೀ ಅಡ್ವೋಕೇಟ್ ರಾಮಣ್ಣನವರ ಬಂಗಲೆಗೆ ಬಿಜಯ ಮಾಡಿಸಿ ಅಲ್ಲಿ ಮಹಾಮಂಗಳಾರತಿ ನಂತರ ಅನ್ನಸಂತರ್ಪಣೆ ನಡೆಯುತ್ತಿತ್ತು. ಈಗ ಪುದುವಟ್ಟು ಸೇವಾರ್ಥದಾರರಿಂದ ಬೀದಿಯಲ್ಲಿ ಉತ್ಸವ, ಮನೆ ಮನೆಗಳಲ್ಲಿ ಮಂಟಪೋತ್ಸವ ಮುಗಿದ ಮೇಲೆ ಮಂದಿರದಲ್ಲಿ ಪಾನಕ ಪೂಜೆ ನಡೆಯುತ್ತಿದೆ.

## <u>ಶ್ರೀ ಸದಾಶಿವ ಬ್ರಹ್ಮೇಂದ್ರರ ಆರಾಧನೆ</u>

ಪ್ರತಿ ವರ್ಷವೂ ವೈಶಾಖ ಶುದ್ಧ ದಶಮಿಯ ದಿವಸ ಶ್ರೀ ಸದಾಶಿವ ಬ್ರಹ್ಮೇಂದ್ರರ ಆರಾಧನೆ ನಡೆಯುತ್ತಿದೆ. ಹಿಂದೆಯೇ ತಿಳಿಸಿರುವಂತೆ ಶ್ರೀ ಭವಾನಿ ಸ್ವಾಮಿಗಳು ಮೈಸೂರಿಗೆ ಬಂದಿದ್ದಾಗ್ಗೆ, ಅವರ ಆದೇಶದಂತೆ ಇದನ್ನು ನಡೆಸಲಾಗುತ್ತಿದೆ. ಶ್ರೀ ಸದಾಶಿವ ಬ್ರಹ್ಮೇಂದ್ರರ ಒಂದು ಕೈಬರಹದ ಚಿತ್ರವು ಮಂದಿರದಲ್ಲಿದೆ. ಬೆಳಿಗ್ಗೆ ಸದಾಶಿವ ಬ್ರಹ್ಮೇಂದ್ರರ ಪೂಜೆ, ಸಾಲಿಗ್ರಾಮಕ್ಕೆ ಅಭಿಷೇಕ, ಪೂಜೆ, ನೈವೇದ್ಯಾದಿಗಳ ನಂತರ ಮಂಗಳಾರತಿ ಅಂದು ಒಬ್ಬ ಬ್ರಹ್ಮಚಾರಿಗೆ ಊಟವನ್ನೇರ್ಪಡಿಸಲಾಗಿದೆ. ಈ ಕಾರ್ಯವನ್ನು ಪ್ರಾರಂಭದಲ್ಲಿ ಒಬ್ಬಿಬ್ಬರ ಸದಸ್ಯರು ತಮ್ಮ ಖರ್ಚಿನಲ್ಲೇ ನಡೆಸುತ್ತಿದ್ದರು. ನಂತರ ಶ್ರೀ ರಾ. ಅನಂತರಾಮು, ಕೆ.ಎಸ್.ನಾರಾಯಣ್ ಈ ಮಹನೀಯರು

ತಲಾ ೨೫೦.೦೦ ಒಟ್ಟು ಪುದುವಟ್ಟು ನೀಡಿರುತ್ತಾರೆ. ಇದರಲ್ಲಿನ ಅಲ್ಪ ಬಡ್ಡಿಯಲ್ಲಿ ಕಾರ್ಯವನ್ನು ನಡೆಸಲಾಗುತ್ತಿದೆ. ಈಗ ಈ ಕಾರ್ಯಕ್ರಮ ಸ್ವಯಂಪಾಕದ ರೂಪದಲ್ಲಿ ನಡೆಯುತ್ತಿದೆ.

ನವರಾತ್ರಿ ಉತ್ಸವದಲ್ಲಿ ೯ ದಿವಸಗಳೂ ಸಂಜೆ ಸೀತಮ್ಮನವರಿಗೆ ಕುಂಕುಮ ಅರ್ಚನೆಯು, ಮಹಿಳೆಯರಿಂದ ಸಾಮೂಹಿಕವಾಗಿ ನಡೆಸಲ್ಪಡುತ್ತದೆ. ಮಂಗಳದ ದಿವಸ ಮಹಿಳೆಯರಿಗೆ ಅರಿಶಿನ, ಕುಂಕುಮಗಳನ್ನು, ಕುಪ್ಪಸದ ಕಣವನ್ನು ಕೊಡಲಾಗುತ್ತದೆ. ಈಗ ಇದು ಸ್ವಲ್ಪ ಬದಲಾವಣೆಗೊಂಡು ಆ ದಿನ ಅರಿಶಿನ, ಕುಂಕುಮದೊಡನೆ ಕುಪ್ಪಸದ ಕಣದ ಬದಲು ಹಣವನ್ನು ನೀಡಲಾಗುತ್ತಿದೆ.

ಧನುರ್ಮಾಸದ ಪೂಜೆಯೂ ಸಹ ಪ್ರತಿವರ್ಷ ಸೇವಾರ್ಥಿಗಳಿಂದ ನಡೆಸಲಾಗುತ್ತಿದೆ. ೨೦೦೪ರ ಧನುರ್ಮಾಸದ ವೇಳೆ ಸುಮಾರು ೫೪ ಜನ ಮಂದಿರದಲ್ಲಿ ಧನುರ್ಮಾಸದ ಪೂಜೆಯನ್ನು ಮಾಡಿಸಿರುತ್ತಾರೆ. ಈ ಸಮಯದಲ್ಲಿ ಬರುವ ಆದಾಯ ಮತ್ತು ಖರ್ಚು ಸರಿಹೊಂದುತ್ತಿದೆ.

ಇತ್ತೀಚೆಗೆ ಪ್ರತಿ ತಿಂಗಳು ಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಇದುವರೆಗೂ ಅನೇಕ ಕಲಾವಿದರು ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಟ್ಟಿದ್ದಾರೆ. ಹೀಗಾಗಿ ರಾಮಮಂದಿರದಲ್ಲಿ ಒಂದಲ್ಲ ಒಂದು ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಲೇ ಇವೆ.

ಸೆಪ್ಟೆಂಬರ್ ೨೦೦೧ ರಲ್ಲಿ ಅನೇಕ ವರ್ಷಗಳ ಕಾಲ ಬಹಳ ನಿಷ್ಠೆಯಿಂದ ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದ, ಶ್ರೀರಾಮನ ಪೂಜಾ ಕೈಂಕರ್ಯಗಳನ್ನು ವಿಧಿವತ್ತಾಗಿ ನಡೆಸುತ್ತಿದ್ದ ಅರ್ಚಕರಾದ ಶ್ರೀ ಕೆ.ಎಸ್.ನಾರಾಯಣ್‌ಅವರನ್ನು ಸಭೆಯ ವತಿಯಿಂದ ಸನ್ಮಾನಿಸಲಾಯಿತು. ಈಗ ಸದರಿಯವರು ದಿವಂಗತರಾಗಿರುತ್ತಾರೆ. ಈ ಮಹನೀಯರು ರಾಮಮಂದಿರದ ಇತಿಹಾಸದಲ್ಲಿ ಬೆಲೆ ಕಟ್ಟಲಾರದಂತಹ ಸೇವೆಯನ್ನು ಸಲ್ಲಿಸಿರುತ್ತಾರೆ. ಸದರಿಯವರು ತಮ್ಮ ಸ್ವಯಾರ್ಜಿತ ಮನೆಯನ್ನು ಸಹಾ ತಮ್ಮ ಪತ್ನಿಯ ಕಾಲಾನಂತರ ರಾಮಮಂದಿರಕ್ಕೆ ಸೇರಬೇಕೆಂದು ಮರಣಶಾಸನವನ್ನು ಬರೆದು ಇಟ್ಟಿದ್ದು ಅದು ಇತ್ತೀಚೆಗಷ್ಟೆ ಅಧ್ಯಕ್ಷರ ಕೈಸೇರಿದೆ.

<u>ಗುಜರಾತಿನ ಭೂಕಂಪ ನಿಧಿಗೆಂದು ೫,೦೦೦.೦೦ ರೂಪಾಯಿಗಳನ್ನು ಸಭಾವತಿಯಿಂದ ನೀಡಲಾಗಿದೆ.</u>

ಪ್ರಭವ ಸಂವತ್ಸರದ ಶ್ರೀ ರಾಮೋತ್ಸವದ ವೇಳೆಯಲ್ಲಿ ದಿನಾಂಕ ೨೦.೦೪.೨೦೦೩ ರ ಸೋಮವಾರದಂದು ಶ್ರೀ ರಾಮ ಪಟ್ಟಾಭಿಷೇಕದ ದಿನ ಹಿಂದಿನ ಕಾರ್ಯದರ್ಶಿಗಳಾಗಿದ್ದ ಶ್ರೀ ವಿ.ಎಸ್. ಶ್ರೀಕಂಠಶಾಸ್ತ್ರಿಗಳನ್ನು ಮಂದಿರದ ವತಿಯಿಂದ ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀಮತಿ ವಾಣಿ ವೆಂಕಟರಾಂ, ಸಮಾಜ ಸೇವಕಿ, ವೇ.ಬ್ರ.ಶ್ರೀ ಕೃಷ್ಣಸ್ವಾಮಿ ಶಾಸ್ತ್ರಿಗಳು ಮತ್ತು ಸಭೆಯ ಸದಸ್ಯರಾದ ವಯೋವೃದ್ಧರಾದ ಶ್ರೀ ಎಸ್.ವಿಶ್ವನಾಥರಾಯರನ್ನೂ ಸಹಾ ಸೂಕ್ತವಾಗಿ ಸನ್ಮಾನಿಸಲಾಯಿತು.

ರಾಮಮಂದಿರದ ಅಭಿವೃದ್ಧಿ ಕಾರ್ಯಕ್ರಮಗಳು ದಿನೇ ದಿನೇ ಉನ್ನತ ಮಟ್ಟಕ್ಕೆ ಬರುತ್ತಿದೆ. ಈ ವಿವರಗಳನ್ನು ಸಾಮಾನ್ಯ ಸದಸ್ಯರ ಸಭೆಯ ೨೦೦೩ರ ಕಾರ್ಯದರ್ಶಿಯ ವರದಿಯಲ್ಲಿ ತಿಳಿಸಿಲಾಗಿದೆ.

ದಿವಂಗತ ಸತ್ಯನಾರಾಯಣ ಶಾಸ್ತ್ರಿಗಳ ವಿಲ್ ರೀತ್ಯಾ ಅವರ ವಾಸದ ಮನೆಯ ಸ್ವತ್ತನ್ನು ಸಭೆಯ ಸುಪರ್ದು ಪಡೆಯಲಾಗಿದೆ. ದಿವಂಗತ ಶಾರದಮ್ಮನವರ ಸಹೋದರರಾದ ಶ್ರೀಯುತ ತಿಪ್ಪಣ್ಣನವರು ಸದರಿ ಸ್ವತ್ತಿನ ಕಾಗದ ಪತ್ರಗಳನ್ನು ಸಭೆಗೆ ತಲುಪಿಸಿರುತ್ತಾರೆ. ಸದರಿ ಸ್ವತ್ತನ್ನು ಶ್ರೀಯುತ ಸತ್ಯನಾರಾಯಣ ಶಾಸ್ತ್ರಿಗಳು ಶ್ರೀಮತಿ ಶಾಂತಮ್ಮ ರವರಿಂದ ದೇವರಾಜ ಮೊಹಲ್ಲಾ, ಸೀಬಯ್ಯ ರಸ್ತೆಯಲ್ಲಿರುವ ೧೪೩೨:೬ ಮನೆಯನ್ನು ಮೈಸೂರು ನಗರ ಉಪ ನೊಂದಣಾಧಿಕಾರಿಯವರ ಕಛೇರಿಯಲ್ಲಿ ೫೩೦೨ ನೇ ನಂಬರ್ ಸಂಪುಟ ೩೩೪೯, ಪುಟ ಸಂಖ್ಯೆ ೯೦ ರಿಂದ ೯೫ ಪುಸ್ತಕ ನಂ. ೧, ದಿನಾಂಕ ೦೩.೦೩.೧೯೮೩ ರಂದು ಖರೀದಿಸಿರುತ್ತಾರೆ.

೨೦೦೩ರ ಅಕ್ಟೋಬರ್ ತಿಂಗಳಲ್ಲಿ ನಡೆದ ಸರ್ವಸದಸ್ಯರ ಸಭೆಯಲ್ಲಿ ಶ್ರೀರಾಮಾಭ್ಯುದಯ ಸಭೆಯನ್ನು ಟ್ರಸ್ಟ್ ಆಗಿ ಮಾಡಲು ಅನುಮತಿ ಪಡೆಯಲಾಗಿದೆ. ಇದರಂತೆ, ೨೦೦೪ರ ಜನವರಿ ೨೩ ರಂದು ಸಮಿತಿ ಸದಸ್ಯರನ್ನೊಳಗೊಂಡಂತೆ ೧೪ ಜನರನ್ನೊಳಗೊಂಡ ಟ್ರಸ್ಟ್ ಡೀಡ್‌ನ್ನು ರಿಜಿಸ್ಟರ್ ಮಾಡಲಾಗಿದೆ. ಹಾಗೂ ಶ್ರೀರಾಮಾಭ್ಯುದಯ ಸಭಾವನ್ನು ಶ್ರೀರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ (ರಿ) ಎಂದು ನಾಮಕರಣ ಮಾಡಲಾಗಿದೆ.

ಟ್ರಸ್ಟ್ ಆದ ಮೇಲೆ ೨೦೦೪ರ ಶ್ರೀ ರಾಮೋತ್ಸವವನ್ನು ಬಹು ವಿಜೃಂಬಣೆಯಿಂದ ಮಾಡಲಾಗಿದೆ. ಮಂದಿರದಲ್ಲಿ ಪ್ರಸ್ತುತ ಫೋಟೋದಲ್ಲಿರುವ ರೀತಿಯಲ್ಲೇ ಶ್ರೀ ರಾಮನ ವಿಗ್ರಹ ಪ್ರತಿಷ್ಠಾಪನಾ ಕಾರ್ಯಕ್ರಮದ ಬಗ್ಗೆ ಚರ್ಚೆಗಳು ನಡೆಯುತ್ತಿದೆ. ಏತನ್ಮಧ್ಯೆ ೧೨.೧೦.೨೦೦೩ ರಲ್ಲಿ ಆರನೇ ಮಹಾಸಭೆಯನ್ನು ನಡೆಸಲಾಯಿತು.

೨೦೦೫ನೇ ಇಸವಿಯ ಪಾರ್ಥೀವನಾಮ ಸಂವತ್ಸರದ ಶ್ರೀರಾಮನವಮಿ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು. ಈ ಬಾರಿ ಸಂಗೀತ ಕಾರ್ಯಕ್ರಮದಲ್ಲಿ ಕು. ಲಾವಣ್ಯ ಮತ್ತು ಕುಮಾರಿ ಸುಬ್ಬಲಕ್ಷ್ಮೀ, ಇವರ ದ್ವಂದ್ವ ಸ್ಯಾಕ್ಸೋಫೋನ್ ವಾದನ, ಆರ್.ಕೆ. ಪದ್ಮನಾಭ್‌ರವರ ವೀಣಾವಾದನ ಹಾಗೂ ಶಶಿಧರಕೋಟೆರವರ ಭಕ್ತಿಗಾನ ಸಂಗೀತ ಜನರ ಅಪಾರ ಮೆಚ್ಚುಗೆಗೆ ಪಾತ್ರವಾಯಿತು. ಪಟ್ಟಾಭಿಷೇಕದ ದಿನ ಭಕ್ತಾದಿಗಳ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಮಹಾಮಂಗಳಾರತಿಯ ನಂತರ ಪ್ರಸಾದ ವಿನಿಯೋಗ ಮಾಡಲಾಯಿತು.

ನಮ್ಮ ಸಭೆಗೆ ಪ್ರಮುಖವಾಗಿ ರಾಮೋತ್ಸವದ ಪಟ್ಟಾಭಿಷೇಕದ ದಿನ ಪೂಜೆ ನಡೆಸಿಕೊಡುತ್ತಿದ್ದ ವಯೋವೃದ್ಧರಾದ ವೇ.ಬ್ರ. ಶ್ರೀ ಕೃಷ್ಣಸ್ವಾಮಿ ಶಾಸ್ತ್ರಿಗಳು ಮೇ ೨೦೦೫ರ ಮಾಹೆಯಲ್ಲಿ ದೈವಾದೀನರಾದರು. ಇವರು ನಮ್ಮ ಸಭೆಗೆ ಹಲವಾರು ದಶಕಗಳಿಂದ ಪುರೋಹಿತರಾಗಿ ಸೇವೆ ಸಲ್ಲಿಸಿದ್ದಾರೆ. ಇವರ ವಿಯೋಗದಿಂದ ನಮ್ಮ ಸಂಸ್ಥೆಗೆ ತುಂಬಲಾರದ ನಷ್ಟವಾಗಿದೆ. ಸದರಿಯವರ ಕುಟುಂಬವರ್ಗಕ್ಕೆ ಸಂತಾಪಸೂಚಕ ಸಂದೇಶವನ್ನು ಕಳುಹಿಸಲಾಯಿತು.

ಇದೇ ರೀತಿಯಲ್ಲಿ ನಮ್ಮ ಸಂಸ್ಥೆಗೆ ಹಲವಾರು ರೀತಿಯಲ್ಲಿ ಸಹಾಯ ಮಾಡಿದ್ದ ಕೈಗಾರಿಕೋದ್ಯಮಿ ಶ್ರೀಯುತ ರಾಮತೀರ್ಥರವರ ಮಾತೋಶ್ರೀ ವಿಶಾಲಾಕ್ಷಮ್ಮನವರ ವಿಯೋಗವು ತುಂಬಲಾರದ ನಷ್ಟವನ್ನುಂಟು ಮಾಡಿದೆ. ಇವರ ನಿಧನಕ್ಕೆ ನಮ್ಮ ಸಭಾದಿಂದ ಸಂತಾಪ ಸೂಚಕ ಸಂದೇಶವನ್ನು ಕಳುಹಿಸಿಕೊಡಲಾಗಿದೆ.

ಸೆಪ್ಟೆಂಬರ್ ೨೦೦೫ ರಲ್ಲಿ ನಮ್ಮ ರಾಮಾಭ್ಯುದಯ ಸಭಾಕ್ಕೆ ಬೆಲೆ ಕಟ್ಟಲಾರದ ಸೇವೆಯನ್ನು ಸಲ್ಲಿಸಿದ್ದ ಹಾಗೂ ಮಾಜಿ ಕಾರ್ಯದರ್ಶಿಗಳಾಗಿದ್ದ ಶ್ರೀಯುತ ಶ್ರೀಕಂಠಶಾಸ್ತ್ರಿಗಳ ವಿಯೋಗ ನಮ್ಮ ಸಭೆಗೆ ಭರಿಸಲಾರದ ನಷ್ಟವನ್ನುಂಟು ಮಾಡಿದೆ. ಮೃತರ ಕುಟುಂಬಕ್ಕೂ ಸಹ ಸಂತಾಪ ಸೂಚಕ ಸಂದೇಶವನ್ನು ಕಳುಹಿಸಲಾಯಿತು. ಶ್ರೀಯುತರು ತಮ್ಮ ಅಧಿಕಾರಾವಧಿಯಲ್ಲಿ ಶ್ರೀ ರಾಮ ಮಂದಿರದ ಶತಮಾನೋತ್ಸವ ಸಮಾರಂಭವನ್ನು ೧೯೯೦ ರಲ್ಲೂ ಹಾಗೂ ಶ್ರೀ ರಾಮ ಸಾಮ್ರಾಜ್ಯ ಪಟ್ಟಾಭಿಷೇಕವನ್ನು ೧೯೯೫ ರಲ್ಲೂ ಅದ್ದೂರಿಯಿಂದ ನಡೆಯಲು ಕಾರಣರಾಗಿದ್ದರು.

ಅಕ್ಟೋಬರ್ ೨೦೦೫ ರಲ್ಲಿ ಶ್ರೀಮತಿ ಶಾರದಮ್ಮನವರು ದೈವಾದೀನರಾದರು. ಇವರು ೪೦ ವರ್ಷಗಳಿಗೂ ಮೀರಿ ಅರ್ಚಕರಾಗಿ ಸೇವೆ ಸಲ್ಲಿಸಿದ್ದ ದಿವಂಗತ ಸತ್ಯನಾರಾಯಣ ಶಾಸ್ತ್ರಿಗಳ ಪತ್ನಿಯಾಗಿದ್ದು ಇವರ ವಿಯೋಗವು ಸಭೆಗೆ ತುಂಬಲಾರದ ನಷ್ಟವಾಗಿದೆ.

ನಮ್ಮ ಟ್ರಸ್ಟ್‌ನ ಟ್ರಸ್ಟಿಗಳಲ್ಲೊಬ್ಬರಾದ ವಯೋವೃದ್ಧರಾದ ಹಾಗೂ ಕ್ರಿಯಾಶೀಲ ವ್ಯಕ್ತಿತ್ವವನ್ನು ಹೊಂದಿದ್ದ, ಈ ಹಿಂದೆ ಶಿವರಾಂಪೇಟೆಯಲ್ಲಿ ಎಂ.ಕೆ. ಹಾಸ್ಟೆಲ್‌ನಲ್ಲಿದ್ದ ಶ್ರೀ ಬಾಲರಾಮಮಂದಿರದ ಜೀವಿತ ಸದಸ್ಯರಲ್ಲಿ ಕೊನೆಯವರಾಗಿದ್ದ ಮತ್ತು ಪ್ರಸ್ತುತ ಉಲುಚುಕಮ್ಮೆ ಬ್ರಾಹ್ಮಣ ಸಭಾ ಸದಸ್ಯರು ಆಗಿದ್ದ ಶ್ರೀಯುತ ಎಸ್. ವಿಶ್ವನಾಥರಾವ್ ರವರು ದಿನಾಂಕ ೨೧.೧೧.೨೦೦೫ ರಂದು ದೈವಾಧೀನರಾದರು. ಇವರು **ಖಂಡಿತವಾದಿ ಲೋಕವಿರೋಧಿ** ಎಂಬ ಸೂಕ್ತಿಗೆ ಹೆಸರಾಗಿದ್ದು ಎಷ್ಟೇ ತಾಪತ್ರಯಗಳು ಉಂಟಾದರೂ, ವಿರೋದಗಳಿದ್ದರೂ ಹಿಡಿದ ಕೆಲಸವನ್ನು ಮುಕ್ತ ಮನಸ್ಸಿನಿಂದ ಸಾಧಿಸುತ್ತಿದ್ದರು. ಶ್ರೀ ರಾಮ ಮಂದಿರದ ಆಧಾರಸ್ಥಂಭವೆಂದೇ ಪರಿಗಣಿಸಲಾಗಿದ್ದ ಶ್ರೀಯುತರ ವಿಯೋಗ ಸಭೆಗೆ ಭರಿಸಲಾರದ ನಷ್ಟವನ್ನುಂಟು ಮಾಡಿದೆ.

ಜನವರಿ ೨೦೦೬ ರಲ್ಲಿ ನಮ್ಮ ಸಭೆಯ ಮತ್ತೊಬ್ಬ ಟ್ರಸ್ಟಿಗಳಾದ ಎನ್.ಆರ್. ಶ್ರೀಕಂಠರಾವ್ ರವರು ದೈವಾಧೀನರಾದರು ಇವರಿಗೂ ಸಭೆಯು ಸಂತಾಪವನ್ನು ಸೂಚಿಸಿತು.

ಮಂದಿರಕ್ಕೆ ರೂ.೧೦,೦೦೦.೦೦ ಮತ್ತು ಮೇಲ್ಪಟ್ಟು ಕೊಡುಗೆ ನೀಡುವ ದಾನಿಗಳ ಫೋಟೋಗಳನ್ನು ಮಂದಿರದಲ್ಲಿ ಹಾಕಲಾಗಿದೆ.

೧೯೩೧ರವರೆಗೂ ರಾಮೋತ್ಸವದ ಆಹ್ವಾನ ಪತ್ರಿಕೆಗಳನ್ನು ಒಂದು ಪುಟದಲ್ಲಿ ಮುದ್ರಣ ಮಾಡಿ ಹಂಚುತ್ತಿದ್ದರು. ಆಗಿನ ಕಾರ್ಯದರ್ಶಿಗಳಾದ ಶ್ರೀಯುತ ವಿ.ಎನ್.ಶ್ರೀಕಂಠಯ್ಯ ಮತ್ತು ಲಕ್ಷ್ಮೀನಾರಾಯಣಪ್ಪ ಉರುಫ್ ಪೂರ್ಣಮೂರ್ತಿ ೧೯೫೪ರ ಆಹ್ವಾನ ಪತ್ರಿಕೆಯಲ್ಲಿ ಕಂಡುಬಂದಂತೆ ಅದನ್ನು ೨ ಪುಟಗಳಲ್ಲಿ ಮುದ್ರಿಸಿರುತ್ತಾರೆ. ಅಧ್ಯಕ್ಷರ ಹೆಸರಿನಲ್ಲಿ, ವಿಶೇಷವಾಗಿ ಆಹ್ವಾನ ಪತ್ರಿಕೆಯಲ್ಲಿ ಪಟ್ಟಾಭಿಷೇಕದವರೆಗಿನ ದಿನನಿತ್ಯದ ಸೇವಾರ್ಥಿಗಳ ಹೆಸರುಗಳನ್ನು ಮುದ್ರಿಸಲಾಗುತ್ತಿತ್ತು. ಅಲ್ಲದೆ ಮೊದಲ ಬಾರಿಗೆ ಮಂದಿರದ ಅಭಿವೃದ್ಧಿಗೆ ಕಟ್ಟಡಕ್ಕೆ ನೆರವಾದವರ ಹೆಸರನ್ನು ರೂ.೧೦೧.೦೦ ನೀಡಿದ ಪುದುವಟ್ಟುದಾರರ ಹೆಸರನ್ನು ಆಯಾ ಸ್ಥಳದ ದಾನಿಗಳ ಹೆಸರನ್ನು ವಿಶೇಷವಾಗಿ ಈ ಕೆಳಗಿನವರು ಉಲ್ಲೇಖನೀಯರಾಗಿದ್ದಾರೆ.

೧. ಶ್ರೀಮತಿ ಡಾ. ಡಿ. ವೆಂಕಟಸುಬ್ಬಮ್ಮನವರು, ಮಂದಿರದ ಮೇಲ್ಭಾಗದಲ್ಲಿ ಕಟ್ಟಿರುವ ಕೊಠಡಿಗಾಗಿ ಪೂರ್ತಾ ಖರ್ಚು ರೂ.೧೦೦೧.೦೦ ಕೊಟ್ಟಿರುತ್ತಾರೆ.

೨. ಮುನಿಸಿಪಲ್ ಕೌನ್ಸಿಲರ್ ಶ್ರೀಮಾನ್ ಚೌಡಯ್ಯನವರು, ಆಸ್ಪತ್ರೆ ಕಂಟ್ರಾಕ್ಟರ್ ಸಿದ್ದಲಿಂಗಪ್ಪನವರು ಸಹಾ ಎಲೆಕ್ಟ್ರಿಕಲ್ ಸೀಲಿಂಗ್ ಫ್ಯಾನ್ ಹಾಕಿಸಿಕೊಟ್ಟಿರುತ್ತಾರೆ.

೩. ಕಂಟ್ರಾಕ್ಟರ್ ಶ್ರೀ ಡಿ.ಜಿ. ತಿರುವೆಂಕಟ ಮೊದಲಿಯಾರ್ ಅವರು ಗರ್ಭಾಂಕಣದ ಮಂಟಪ ವಗೈರೆಗಳನ್ನು ಉದಾರವಾಗಿ ಕಟ್ಟಿಸಿಕೊಟ್ಟಿರುತ್ತಾರೆ.

೪. ಶ್ರೀ ಎಸ್.ಲಕ್ಷ್ಮೀನಾರಾಯಣ ಅವರು ( ಹಿಂದೂಸ್ಥಾನ್ ಎಲೆಕ್ಟ್ರಿಕಲ್ಸ್) ಗರ್ಭಾಂಕಣದ ಚೌಕಟ್ಟಿನ ಲೈಟ್ ಫಿಟ್ಟಿಂಗ್ ಸೇವಾರ್ಥ ನಡೆಸಿಕೊಟ್ಟಿರುತ್ತಾರೆ.

೫. ಶ್ರೀ ಆರ್.ವಿ. ಸದಾಶಿವಮೂರ್ತಿಗಳು ಮಂದಿರದ ಕಟ್ಟಡಕ್ಕೆ ನಲ್ಲಿ ಹಾಕಿಸಿಕೊಟ್ಟಿರುತ್ತಾರೆ.

ಸುಮಾರು ೧೯೬೩ ರಿಂದ ವಿವರವಾದ ಜಮಾ ಖರ್ಚುಗಳನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಿ ತಿಳಿಸಲಾಗುತ್ತಿತ್ತು.

೧೯೮೩.೮೪ ರಿಂದ ಆಹ್ವಾನ ಪತ್ರಿಕೆಯನ್ನು ಒಂದು ವ್ಯವಸ್ಥಿತವಾದ ರೂಪಕ್ಕೆ ತಂದು ಜಾಹಿರಾತುಗಳ ಮೂಲಕ ಮುದ್ರಣದ ಖರ್ಚು ವೆಚ್ಚಗಳನ್ನು ಪ್ರಾರಂಭಿಸಲಾಯಿತು.

೧೯೬೭ ರಿಂದ ಪುದುವಟ್ಟು ಸೇವಾರ್ಥದಾರರ ( ರಾಮೋತ್ಸವದ ಕಾಲದಲ್ಲಿ ಬರುವವರ ಹೆಸರನ್ನು ) ಆಯಾ ದಿವಸಗಳಲ್ಲಿ ದಿನಾಂಕಗಳ ಪ್ರಕಾರ ರಾಮನಸೇವೆ ಸಲ್ಲಿಸಲು ಅನುಕೂಲವಾಗುವಂತೆ ಮುದ್ರಿಸಲಾಗುತ್ತಿದೆ. ಇಂದಿಗೆ ಸುಮಾರು ೧೦೦೦ ಜನ ಪುದುವಟ್ಟು ಸೇವಾರ್ಥಗಳು ವರ್ಷಪೂರ್ತಿ ಅವರು ಅಪೇಕ್ಷಿಸಿದ ದಿವಸಗಳಲ್ಲಿ ಸೇವೆ ನಡೆಸಲಾಗುತ್ತಿದೆ ಎನ್ನಲು ಹರ್ಷವಾಗುತ್ತದೆ.

<u>ವಿಶೇಷ ವಿಷಯಗಳು</u>

<u>ರಾಮಮಂದಿರದಲ್ಲಿ ಶಿಲಾ ವಿಗ್ರಹ ಪ್ರತಿಷ್ಠೆ ಆಗದಿರಲು ಕಾರಣ</u>

೧. ಮುಖ್ಯವಾಗಿ ೧೯೮೩ರವರೆಗೆ ಆರ್ಥಿಕ ಅನಾನುಕೂಲತೆ
೨. ಸ್ಥಳದ ಸಂಕೋಚ, ಸುಮಾರು ೬.೫ ಚದರ ಮಾತ್ರ ಕಟ್ಟಡವಿದೆ. ಕಟ್ಟಡವನ್ನು ವಿಸ್ತರಿಸಲು ಪಕ್ಕದ ಅಂಗಡಿ ಕೋರ್ಟು ವ್ಯವಹಾರದಲ್ಲಿದೆ.
೩. ಇಡೀ ಕಟ್ಟಡದ ಮಾದರಿಯಷ್ಟೆ ಬದಲಾಯಿಸಬೇಕು. ಬಾಡಿಗೆದಾರರನ್ನು ಬಿಡಿಸಬೇಕು.
೪. ೧೯೯೦ ರಿಂದೀಚೆಗೆ ಸೇವಾರ್ಥದಾರರು ಒಂದು ದತ್ತಾತ್ರೇಯ ವಿಗ್ರಹವನ್ನು ಮತ್ತು ಶ್ರೀರಾಮದೇವರ ಶಿಲಾ ಪ್ರತಿಷ್ಠಾಪನೆಯನ್ನು ಸೇವಾರ್ಥವಾಗಿ ಸೇವಾರ್ಥರೂಪದಲ್ಲಿ ಪ್ರತಿಷ್ಠಾಪನೆ ಮಾಡಲು ಕೇಳಿಕೊಂಡಿದ್ದರು. ಆದರೆ ಮೇಲಿನ ಕಾರಣಗಳಿಂದ ಒಪ್ಪಲಾಗಲಿಲ್ಲ.

ಶೃಂಗೇರಿ ಸ್ವಾಮಿಗಳು ತಮ್ಮ ಅನುಗ್ರಹ ಭಾಷಣದಲ್ಲಿ ಈ ಮಂದಿರದಲ್ಲಿ ಸ್ವಾಮಿ ಸನ್ನಿಧಿ ಇದೆ ಎಂದು ತಿಳಿಸಿರುತ್ತಾರೆ.

ಸಭೆಯ ಆಡಳಿತ ವ್ಯವಹಾರವನ್ನು ಟ್ರಸ್ಟ್‌ಗೆ ವಹಿಸಿಕೊಂಡ ಮೇಲೆ, ಇನ್ನೂ ಹೆಚ್ಚಿನ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳಲು ಪ್ರಯತ್ನಿಸಲಾಗುತ್ತಿದೆ. ಈಗಿನ ಟ್ರಸ್ಟ್‌ನ ಟ್ರಸ್ಟಿಗಳೆಲ್ಲರೂ, ಟ್ರಸ್ಟಿನ ಛೇರ್‌ಮನ್‌ರಾದ ಡಾ. ಎನ್.ಶ್ರೀರಾಮ್‌ರವರ ಮತ್ತು ಲಯನ್ ಎಸ್. ರಾಮಕೃಷ್ಣರವರ ಸಹಯೋಗಿತ್ವದಲ್ಲಿ ಹಾಗೂ ಟ್ರಸ್ಟಿನ ವಯೋವೃದ್ಧ ಟ್ರಸ್ಟಿಗಳಾದಂತಹ ಎಸ್.ವಿಶ್ವನಾಥ್‌ರಾವ್ ಮತ್ತು ಜ್ಯೋತಿಷ್ಯವಿದ್ವಾನ್ ಕೃಷ್ಣಮೂರ್ತಿಯವರ ಮಾರ್ಗದರ್ಶನದಲ್ಲಿ ರಾಮೋತ್ಸವದ ಕಾರ್ಯಕ್ರಮಗಳನ್ನು ಅದ್ದೂರಿಯಾಗಿ ನಡೆಸಿಕೊಂಡು ಬರುತ್ತಿದೆ. ನಮ್ಮ ಟ್ರಸ್ಟ್‌ನ ಕಾರ್ಯಚಟುವಟಿಕೆಗಳು ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ.

ಸಭೆಯಲ್ಲಿ ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಅತ್ಯಂತ ಜಾಗರೂಕತೆಯಿಂದ ಅವಲೋಕಿಸಿ, ಸುಮಾರು ಹದಿನೈದು ವರ್ಷಕ್ಕೂ ಮೀರಿ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದ ವಿ.ಎಸ್.ಶ್ರೀಕಂಠಶಾಸ್ತ್ರಿಗಳ ಶ್ರಮದಿಂದ ಮಂದಿರದ ಸಂಕ್ಷಿಪ್ತ ಇತಿಹಾಸವನ್ನು ಸಂಗ್ರಹಿಸಲಾಗಿದೆ.

ఎందరో మహానుభావులు అందరికీ వందనములు

శ్రీరామ జయ రామ జయ జయ రామ

**ಸಮಸ್ತ ಸನ್ಮಂಗಳಾನಿ ಭವನ್ತು**

# ರಾಮೋತ್ಸವದ ಪೂಜಾ ವಿಶೇಷ

## ದೇವಸ್ಥಾನದಲ್ಲಿ ವರ್ಷವಿಡೀ ನಡೆಯುವ ಕಾರ್ಯಕ್ರಮಗಳ ಪರಿಚಯ

ನಮ್ಮ ಮಂದಿರದಲ್ಲಿ ಯುಗಾದಿ ಹಬ್ಬದ ಅಂಗವಾಗಿ ಮಂದಿರಕ್ಕೆ ಸ್ಥಳದಾನ ಮಾಡಿದ ಮಹನೀಯರಾದ ಚೆಲವಯ್ಯನವರ ವಂಶಸ್ಥರ ಶ್ರೇಯಃ ಪ್ರಾರ್ಥನೆಯನ್ನು ಕೋರಿ ದೇವರಿಗೆ ಪೂಜೆ, ನೈವೇದ್ಯ ಪ್ರಸಾದ ವಿನಿಯೋಗ ನಡೆಯುತ್ತಿದೆ. ಇವರ ವಂಶಸ್ಥರು ಆ ದಿನ ತಪ್ಪದೆ ಶ್ರದ್ಧಾಭಕ್ತಿಯಿಂದ ಮಂದಿರಕ್ಕೆ ಭೇಟಿ ನೀಡಿ ದೇವರ ಕಾರ್ಯನಡೆಸಿಕೊಡುತ್ತಿದ್ದಾರೆ.

ಪ್ರತಿ ವರ್ಷ ಚೈತ್ರಶುದ್ಧ ನವಮಿಯಿಂದ ಪ್ರಾರಂಭಿಸಿ ಹತ್ತು ದಿನಗಳ ಕಾಲ ಪೂಜಾ ಮಹೋತ್ಸವಗಳು ನಡೆದು ಹನ್ನೊಂದನೇ ದಿನ ಶ್ರೀರಾಮ ಪಟ್ಟಾಭಿಷೇಕವನ್ನು ಮಾಡುವುದು ಇಲ್ಲಿಯ ವಾಡಿಕೆ.

ಮೊದಲನೇ ದಿನ ವರುಣ ಕಳಶ ಸ್ಥಾಪಿಸಿ ಷೋಡಸೋಪಚಾರ ಪೂಜೆಗಳನ್ನು ಮಾಡಲಾಗುತ್ತದೆ. ಪ್ರತಿದಿನ ಈ ಕಳಶ ಪೂಜೆಯನ್ನು ಯಥಾವತ್ತಾಗಿ ಮಾಡುವುದೇ ಅಲ್ಲದೇ ಶ್ರೀರಾಮನ ಪಂಚಲೋಹ ಹಾಗೂ ಬೆಳ್ಳಿಯ ವಿಗ್ರಹಗಳಿಗೆ ಸಾಲಿಗ್ರಾಮ ಬಾಣ ಲಿಂಗಕ್ಕೆ ವಿಧಿಪೂರ್ವಕವಾಗಿ ರುದ್ರಾಭಿಷೇಕ, ಪುರುಷಸೂಕ್ತ, ಶ್ರೀ ಸೂಕ್ತ ಇತ್ಯಾದಿ ಸೂಕ್ತಗಳಿಂದ ಅಭಿಷೇಕ ಮಾಡಿ ಸಹಸ್ರನಾಮಾರ್ಚನೆ ಮಾಡಿ ನೈವೇದ್ಯ ಮಂಗಳಾರತಿ ನಡೆಯುತ್ತದೆ. ಈ ಕಳಶವನ್ನು ಹತ್ತು ದಿನಗಳೂ ಬದಲಾಯಿಸದೆ ಪೂಜಿಸಲಾಗುತ್ತದೆ. ಮೊದಲನೇ ದಿನ ಪಾನಕ, ನೀರು ಮಜ್ಜಿಗೆ, ಕೋಸಂಬರಿ ವಿತರಿಸಲಾಗುತ್ತದೆ. ಉಳಿದ ೯ ದಿನ ನೀರುಮಜ್ಜಿಗೆ ವಿತರಿಸಲಾಗುತ್ತದೆ. ೧೦ ದಿನವೂ ಪ್ರತಿದಿನ ಬೆಳಿಗ್ಗೆ ಶಾಲ್ಯಾನ್ನವನ್ನು ನಿವೇದಿಸಿ ಜಾಹಿರಾತುದಾರರಿಗೆ ಹಾಗೂ ಆಯಾದಿನದ ಸೇವಾರ್ಥದಾರರಿಗೆ ಪ್ರಸಾದ ವಿನಿಯೋಗಿಸಲಾಗುತ್ತದೆ. ಸಾಯಂಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿ ಭಕ್ತಾದಿಗಳಿಗೆ ಹಾಗೂ ಕಾರ್ಯಕ್ರಮವನ್ನು ಪ್ರಾಯೋಜಿಸುವವರಿಗೆ ಪ್ರಸಾದ ವಿನಿಯೋಗ ಮಾಡಲಾಗುತ್ತದೆ.

೧೧ನೇ ದಿನ ಅಂದರೆ ಪಟ್ಟಾಭಿಷೇಕದ ದಿನ ಗಣಪತಿ ಪೂಜೆ, ಪುಣ್ಯಾಹವಾಚನ, ದೇವನಾಂದಿ, ಪಂಚಾಮೃತ ಅಭಿಷೇಕ ಮಾಡಿದ ನಂತರ ನಾಲ್ಕು ಸಮುದ್ರಗಳ ನೀರನ್ನೂ ನಾಲ್ಕು ಕಳಶಗಳಲ್ಲಿ ಆಹ್ವಾನಿಸಿ ಮಧ್ಯದಲ್ಲಿ ಗಂಗಾಕಳಸವನ್ನಿಟ್ಟು ಷೋಡಶೋಪಚಾರದಿಂದ ಕಳಶ ಪೂಜೆಯನ್ನು ಮಾಡಲಾಗುತ್ತದೆ. ಈ ಹಿಂದಿನ ೧೦ ದಿನಗಳಲ್ಲಿ ಸ್ಥಾಪಿಸಲಾದ ವರುಣ ಕಳಶವನ್ನು ವಿಸರ್ಜಿಸಲಾಗುತ್ತದೆ.

ನಂತರ ಈ ಪಂಚ ಕಳಶಗಳ ನೀರನ್ನು ತೆಗೆದುಕೊಂಡು ಶ್ರೀರಾಮನ ವಿಗ್ರಹ, ಶ್ರೀರಾಮಯಂತ್ರ, ಶ್ರೀ ಚಕ್ರ, ಸಾಲಿಗ್ರಾಮಗಳಿಗೆ ಮಂತ್ರ ಪುರಸ್ಸರವಾಗಿ ಅಂದರೆ ಮಹಾನಾರಾಯಣ ಉಪನಿಷತ್, ರುದ್ರ ಚಮಕ, ಪುರುಷಸೂಕ್ತ, ಶ್ರೀ ಸೂಕ್ತ, ಗಣಪತಿ ಅಥರ್ವಶೀರ್ಷ, ವಿಷ್ಣುಸೂಕ್ತ, ದೇವಿಸೂಕ್ತ, ದುರ್ಗಾ ಸೂಕ್ತ, ಲಘು ನಾರಾಯಣ ಉಪನಿಷತ್ತು, ತೈತ್ತರೀಯ ಉಪ ನಿಷತ್ತಿನಲ್ಲಿ ಬರುವ ಬ್ರಹ್ಮ, ಭೃಗು, ಶಿಕ್ಷಾ ವಲ್ಲಿಗಳಿಂದ ಆಯ್ದ ಶ್ಲೋಕಗಳು, ಋಗ್, ಯಜು, ಸಾಮ ಹಾಗೂ ಅಥರ್ವಣ ವೇದಗಳ ಮಂತ್ರಗಳನ್ನು ಪಠಿಸುತ್ತಾ ಅಭಿಷೇಕ ಮಾಡಿ, ಪತ್ರ ಪೂಜೆ, ಪುಷ್ಪ ಪೂಜೆ, ಅಂಗ ಪೂಜೆ, ಆವರಣ ಪೂಜೆ, ಸಹಸ್ರನಾಮಾರ್ಚನೆ ಮತ್ತು ಕುಂಕುಮಾರ್ಚನೆ ಮಾಡಿ ಶ್ರೀರಾಮ ಪಟ್ಟಾಭಿಷೇಕವನ್ನು ಅತ್ಯಂತ ವೈಭವೋಪೇತವಾಗಿ ನೆರವೇರಿಸಲಾಗುತ್ತಿದೆ.

ಏತನ್ಮಧ್ಯೆ ಶ್ರೀಮದ್ರಾಮಯಣದ ಪಟ್ಟಾಭಿಷೇಕ ಸರ್ಗವನ್ನು ಗಮಕ ವಾಚನ ಮಾಡಿ ವಿವರಣೆಯನ್ನು ನೀಡಿದ ನಂತರ ಸ್ವಾಮಿಗೆ ಮಹಾನೈವೇದ್ಯ, ಮಹಾಮಂಗಳಾರತಿಯ ನಂತರ ಅಷ್ಟಾವದಾನ ಸೇವೆ ಅಂದರೆ ಮಂಗಳವಾದ್ಯ, ಚತುರ್ವೇದ ಸ್ತುತಿ, ಪುರಾಣ ಸ್ತುತಿ, ಶಾಸ್ತ್ರ ಸ್ತುತಿ, ಸಂಗೀತ, ಗಾಯನ ಸೇವೆಗಳನ್ನು ಒಳಗೊಂಡು ರಾಷ್ಟ್ರಾಶೀರ್ವಾದದೊಂದಿಗೆ ಶ್ರೀರಾಮನವಮಿ ಕಾರ್ಯಕ್ರಮಗಳಿಗೆ ವಿರಾಮ ನೀಡಲಾಗುತ್ತದೆ. ಪಟ್ಟಾಭಿಷೇಕದ ದಿನ ಸುಮಾರು ೮೦೦ ಜನರಿಗೆ ಭೋಜನ ವ್ಯವಸ್ಥೆ ಶ್ರೀ ಕೃಷ್ಣಮಂದಿರದಲ್ಲಿ ಮಾಡಲಾಗುತ್ತಿದೆ.

ನಂತರ ಅಂದರೆ ಪಟ್ಟಾಭಿಷೇಕದ ದಿನ ಸಾಯಂಕಾಲ ತಿಲಾಕ್ಷತೆಯಿಂದ ರುದ್ರಕಮಾರ್ಚನೆಯನ್ನು ಮಾಡಿ ಬ್ರಾಹ್ಮಣರಿಗೆ ಫಲ ತಾಂಬೂಲ, ( 6ಜನಕ್ಕೆ ಏಕಾದಶರುದ್ರ ಪಠಣೆ ಮಾಡಿದ ನಂತರ ) ನೀಡಿ ಗೌರವಿಸಲಾಗುತ್ತದೆ.

ಇದು ಅನುಚಾನವಾಗಿ ಶ್ರೀರಾಮಮಂದಿರದಲ್ಲಿ ಮೊದಲಿನಿಂದಲೂ ನಡೆದು ಬರುತ್ತಿರುವ ಕಾರ್ಯಕ್ರಮವಾಗಿರುತ್ತದೆ.

ಪಟ್ಟಾಭಿಷೇಕದ ದಿನದಿಂದ ಎರಡೆರೆಡು ದಿನಗಳ ಅಂತರದಲ್ಲಿ ಈ ಕೆಳಗಿನ ಕಾರ್ಯಕ್ರಮಗಳು ದೇವಸ್ಥಾನದಲ್ಲಿ ನಡೆಯುತ್ತದೆ.

೧. **<u>ಹನುಮಂತೋತ್ಸವ</u>** : ಸಾಯಂಕಾಲ ಶ್ರೀರಾಮ ಲಕ್ಷ್ಮಣ ಸೀತಾದೇವಿ ಹಾಗೂ ಹನುಮಂತನನ್ನು ಪೂಜಿಸಿ ಉತ್ಸವಮೂರ್ತಿಯನ್ನು ರಥದಲ್ಲಿರಿಸಿಕೊಂಡು ಪೇಟೆ ಬೀದಿಯಲ್ಲಿ ಮೆರವಣಿಗೆ ಮಾಡಲಾಗುತ್ತದೆ. ನಂತರ ಶ್ರೀರಾಮ ಮಂದಿರದಲ್ಲಿ ಪ್ರಸಾದ ವಿನಿಯೋಗ ಹಾಗೂ ಸಿಹಿ ಹಂಚಲಾಗುತ್ತದೆ.

೨. **<u>ಶಯನೋತ್ಸವ</u>** : ಹನುಮಂತೋತ್ಸವ ನಡೆದ ಎರಡು ದಿನದ ಅಂತರದಲ್ಲಿ ಶಯನೋತ್ಸವ ನಡೆಯುತ್ತದೆ. ಈ ದಿನದಂದು ಐದು ಘನಿಯಾರಗಳನ್ನು ಭಗವಂತನ ಮುಂದೆ ಇಟ್ಟು ಫಲಪುಷ್ಪಗಳೊಂದಿಗೆ ಒಂದು ಲೋಟ ಹಾಲು ಇಟ್ಟು ಅರ್ಚಿಸಿ ಪೂಜಿಸಲಾಗುವುದು. ಒಳಗುಡಿ ಉತ್ಸವದ ದಿನ ಈ ಘನಿಯಾರಗಳನ್ನು ಹಾಗೂ ಫಲವನ್ನು ಟ್ರಸ್ಟಿಗಳೆಲ್ಲರಿಗೂ ಹಂಚಲಾಗುತ್ತೆ. ಈ ಶಯನೋತ್ಸವದ ದಿನ ಸುವಾಸಿನಿಯರಿಗೆ ಸುಗಂದಿತ ಕ್ಷೀರವನ್ನು ನೀಡಿ ಗೌರವಿಸಲಾಗುತ್ತದೆ. ಈ ಶಯನೋತ್ಸವದ ಪೂರ್ತಿ ಕಾರ್ಯಕ್ರಮವನ್ನು ದಿವಂಗತ ಬಿ.ಟಿ.ಸುಬ್ರಹ್ಮಣ್ಯರವರ ಮಕ್ಕಳು ನಡೆಸಿಕೊಡುತ್ತಿದ್ದಾರೆ.

**<u>ಒಳಗುಡಿ ಉತ್ಸವ</u>** :

ಶಯನೋತ್ಸವ ನಡೆದ ಎರಡು ದಿನಗಳ ಅಂತರದಲ್ಲಿ ಒಳಗುಡಿ ಉತ್ಸವವನ್ನು ನಡೆಸಲಾಗುತ್ತದೆ. ಈ ಉತ್ಸವವನ್ನು ಇದೇ ಶ್ರೀರಾಮಪೇಟೆಯ ಎಂ.ಕೆ. ಹಾಸ್ಟೆಲ್‌ನಲ್ಲಿದ್ದ ಶ್ರೀ ಬಾಲರಾಮಮಂದಿರ, ರಾಮಾಭ್ಯುದಯ ಸಭಾದೊಡನೆ ವಿಲೀನಗೊಂಡ ಜ್ಞಾಪಕಾರ್ಥವಾಗಿ ನಡೆಸಲಾಗುತ್ತಿದೆ. ಈ ದಿನ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿ ಪ್ರಸಾದ ವಿನಿಯೋಗ ಮಾಡಲಾಗುತ್ತದೆ.

**<u>ಶಂಕರ ಜಯಂತಿ</u>** :

ಶಂಕರ ಜಯಂತಿಯನ್ನು ರಾಮಮಂದಿರದಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಶಂಕರ ಭಗವಾತ್ಪಾದರಿಗೆ ಅಭಿಷೇಕ, ಅರ್ಚನೆ, ನೈವೇದ್ಯ ಮಂಗಳಾರತಿಯನ್ನು ಮಾಡಲಾಗುತ್ತದೆ. ಪ್ರಸಾದ ವಿನಿಯೋಗವನ್ನು ಸಹ ಮಾಡಲಾಗುತ್ತದೆ. ಶ್ರೀ ಶಂಕರ ಭಗವತ್ಪಾದರನ್ನು ರಥದಲ್ಲಿ ಕೂರಿಸಿ ಪೇಟೆ ಬೀದಿಗಳಲ್ಲಿ ಮೆರವಣಿಗೆ ಮಾಡಲಾಗುತ್ತದೆ. ಅಲ್ಲಲ್ಲಿ ಮಂಟಪೋತ್ಸವಗಳು ನಡೆದು ಪ್ರಸಾದ ವಿನಿಯೋಗ ನಡೆಯುತ್ತದೆ.

**ಇದನ್ನು ಹೊರತುಪಡಿಸಿದಂತೆ ಶ್ರೀರಾಮಮಂದಿರದಲ್ಲಿ ನಡೆಯುವ ಇತರ ಕಾರ್ಯಕ್ರಮಗಳು :**

ಪ್ರತಿವರ್ಷ ವೈಶಾಖ ಶುಕ್ಲ ದಶಮಿಯಂದು ಶ್ರೀ ವೀರ ಬ್ರಹ್ಮೇಂದ್ರರ ಆರಾದನಾ ಮಹೋತ್ಸವದ ಅಂಗವಾಗಿ ಒಬ್ಬ ಬ್ರಹ್ಮಾಚಾರಿಗೆ ಸ್ವಯಂಪಾಕ, ವಸ್ತ್ರವನ್ನು ದಕ್ಷಿಣೆಯೊಂದಿಗೆ ನೀಡಲಾಗುತ್ತದೆ. ಆ ದಿನ ದೇವರಿಗೆ ವಿಶೇಷ ಪೂಜೆ ನಡೆಯುತ್ತದೆ. ಇದು ೧೯೬೪ ರಿಂದಲೂ ಅವ್ಯಾಹತವಾಗಿ ನಡೆದುಕೊಂಡು ಬರುತ್ತಿದೆ. ಮೊದಲು ಬ್ರಹ್ಮಚಾರಿಗೆ ಭೋಜನ ವ್ಯವಸ್ಥೆ ಮಾಡಲಾಗುತ್ತಿತ್ತು. ಈಗ ಇದು ಸ್ವಯಂ ಪಾಕ ರೂಪದಲ್ಲಿ ನಡೆಯುತ್ತಿದೆ.

ಶ್ರಾವಣಮಾಸದಲ್ಲಿ ಋಗ್ ಹಾಗೂ ಯಜುರುಪಾಕರ್ಮಗಳನ್ನು ಮಂದಿರದಲ್ಲಿ ನಡೆಸಲಾಗುತ್ತಿದೆ. ಇದರಲ್ಲಿ ಅನೇಕರು ಪಾಲ್ಗೊಂಡು ಪ್ರಯೋಜನ ಪಡೆಯುತ್ತಿದ್ದಾರೆ.

ಭಾದ್ರಪದ ಮಾಸದಲ್ಲಿ ಸಿದ್ದಿವಿನಾಯಕನನ್ನು ಪ್ರತಿಷ್ಠಾಪಿಸಿ ೨೧ ದಿನಗಳ ಪರ್ಯಂತ ಪೂಜಿಸಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬರುತ್ತಿದ್ದೇವೆ. ಕಡೆಯದಿನ ವಿನಾಯಕಸ್ವಾಮಿಗೆ ವಿಶೇಷ ಪೂಜೆ ಮಾಡಿ ಪ್ರಸಾದ ವಿನಿಯೋಗದೊಂದಿಗೆ ಗಣಪತಿಯನ್ನು ವಿಸರ್ಜಿಸಲಾಗುವುದು ಇಲ್ಲಿನ ಪದ್ದತಿಯಾಗಿದೆ.

ಆಶ್ವಯುಜ ಮಾಸದಲ್ಲಿ ನವರಾತ್ರಿ ಉತ್ಸವದ ಅಂಗವಾಗಿ ವಿಜಯದಶಮಿಯವರೆಗೆ ಸುಹಾಸಿನಿಯರಿಂದ ಲಲಿತ ಸಹಸ್ರನಾಮ ಪಾರಾಯಣ ನಡೆದು, ಕೊನೆಯ ದಿನ ಸುಹಾಸಿನಿಯರಿಗೆ ಫಲತಾಂಬೂಲ ನೀಡಿ, ಗೌರವಿಸಲಾಗುತ್ತದೆ. ಹಾಗೂ ಪ್ರಸಾದ ವಿನಿಯೋಗ ಮಾಡಲಾಗುತ್ತದೆ. ಮೊದಲು ೯ ದಿನ ಕಾರ್ಯಕ್ರಮದ ಅಂತ್ಯದಲ್ಲಿ ಸುಹಾಸಿನಿಯರಿಗೆ ಪಾನಕ ಕೋಸಂಬರಿ ವಿತರಿಸಲಾಗುತ್ತದೆ. ಇದು ಸಹ ರಾಮ ಮಂದಿರದಲ್ಲಿ ಅವ್ಯಾಹತವಾಗಿ ನಡೆದು ಬರುತ್ತಿರುವ ಕಾರ್ಯಕ್ರಮವಾಗಿದೆ.

ಮಾರ್ಗಶಿರ ಮಾಸದ ಪೌರ್ಣಿಮೆಯ ದಿನದಂದು ಸಾಯಂಕಾಲ ವಿಷ್ಣುದೀಪೋತ್ಸವದ ಅಂಗವಾಗಿ ತೀರುಕಾರ್ತಿಕೆ ಯನ್ನು ಆಚರಿಸಲಾಗುತ್ತಿದೆ. ಅಂದರೆ ಸಾಯಂಕಾಲ ೧ ಮೀ ಬಿಳಿಕೋರ ಬಟ್ಟೆಯನ್ನು ಖರೀದಿಸಿ ಅದನ್ನು ಎಣ್ಣೆಯಲ್ಲಿ ನೆನೆಸಿ ಒಂದು ಕೋಲಿಗೆ ಸುತ್ತಿ, ಭಗವಂತನಿಗೆ ಮಂಗಳಾರತಿ ಮಾಡಿ ಮಂದಿರದ ಹೊರಗಡೆ ಶ್ರೀರಾಮಚಂದ್ರನ ಪೋಟೋಕ್ಕೆ ಎದುರಾಗಿ ಈ ಬಟ್ಟೆಗೆ ಮಂಗಳಾರತಿಯನ್ನು ಸ್ಪರ್ಶಿಸಲಾಗುತ್ತದೆ. ಇದರ ಬೆಳಕಿನಲ್ಲಿ ಭಗವಂತನನನ್ನು ದರ್ಶನ ಮಾಡಿ ನಂತರ ರಕ್ಷೆಯನ್ನು ಶ್ರೀರಾಮಚಂದ್ರನ ಪಟ್ಟಕ್ಕೆ ಸ್ಪರ್ಶಿಸಿ ಉತ್ಸವ ಮೂರ್ತಿಗೂ ಹಣೆಗೆ ಹಚ್ಚಲಾಗುತ್ತದೆ. ನಂತರ ನೈವೇದ್ಯ, ಮಹಾಮಂಗಳಾರತಿ ಪ್ರಸಾದ ವಿನಿಯೋಗ ನಡೆಯುತ್ತದೆ.

ಮೇಲ್ಕಂಡ ಕಾರ್ಯಕ್ರಮಗಳ ನಮ್ಮ ರಾಮಮಂದಿರದದಲ್ಲಿ ಪ್ರತಿ ವರ್ಷವೂ ತಪ್ಪದೇ ಆಚರಿಸಿಕೊಂಡು ಬರಲಾಗುತ್ತಿದೆ.

ಅಲ್ಲದೆ ಮಾಸಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಮ್ಮ ರಾಮಮಂದಿರ ವರ್ಷವಿಡೀ ವಿಜೃಂಭಿಸುತ್ತಿದೆ.

# ಶ್ರೀ ರಾಮಾಭ್ಯುದಯ ಸಭಾ ವಿನೋಬ ರಸ್ತೆ, ಶ್ರೀರಾಮಪೇಟೆ, ಮೈಸೂರು.

## ಸಭೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದವರ ಪಟ್ಟಿ

[ 1899 ರಿಂದ 2005 ರವರೆಗೆ ]

| | | |
|---|---|---|
| 1899 ರಿಂದ 1924ರವರೆಗೆ | => | ಶ್ರೀಯುತ ಅವತಿ ರಾಮಯ್ಯನವರು |
| 1924 ರಿಂದ 1933ರವರೆಗೆ | => | ಶ್ರೀಯುತ ಎಂ.ಎಸ್.ರಾಮರಾಯರು |
| 1933 ರಿಂದ 1967ರವರೆಗೆ | => | ಶ್ರೀಯುತ ವಿ.ಲಿಂಗಪ್ಪಯ್ಯನವರು |
| 1967 ರಿಂದ 1983ರವರೆಗೆ | => | ಶ್ರೀಯುತ ಎಂ.ಆರ್.ವೆಂಕಟಸುಬ್ಬಾಶಾಸ್ತ್ರಿಗಳು |
| 1983 ರಿಂದ 1995ರವರೆಗೆ | => | ಶ್ರೀಯುತ ವಿ.ಎಲ್.ರಾಮಚಂದ್ರರಾವ್ |
| 1995 ರಿಂದ 1996ರವರೆಗೆ | => | ಶ್ರೀಯುತ ಆರ್.ಅನಂತರಾಮು |
| 1996 ರಿಂದ 2000ರವರೆಗೆ | => | ಶ್ರೀಯುತ ಎಂ.ಎಸ್.ಕೃಷ್ಣಸ್ವಾಮಿರಾವ್ |
| 2000 ರಿಂದ ಇಲ್ಲಿಯವರೆಗೆ | => | ಶ್ರೀಯುತ ಡಾ.ಎನ್.ಶ್ರೀರಾಮ್ |

## 1899 ರಿಂದ 2005ರವರೆಗೆ ಸಭೆಯ ಉಪಾಧ್ಯಕ್ಷರಾಗಿ ಕೆಲಸ ನಿರ್ವಹಿಸಿದವರ ಪಟ್ಟಿ

| | | |
|---|---|---|
| 1899 ರಿಂದ 1924ರವರೆಗೆ | => | ಶ್ರೀಯುತ ಅವತಿ ರಾಮಯ್ಯನವರು ಏಕಾಂಗಿಯಾಗಿ ಎಲ್ಲಾ ಕೆಲಸವನ್ನೂ ನಿರ್ವಹಿಸಿರುತ್ತಾರೆ. |
| 1924 ರಿಂದ 1933ರವರೆಗೆ | => | ಶ್ರೀಯುತ ವಿ.ಲಿಂಗಪ್ಪನವರು |
| 1933 ರಿಂದ 1955ರವರೆಗೆ | => | ಶ್ರೀಯುತ ಕೆ.ಪಿ. ಗುಂಡಪ್ಪನವರು |
| 1955 ರಿಂದ 1967ರವರೆಗೆ | => | ಶ್ರೀಯುತ ಎಂ.ಆರ್.ವೆಂಕಟಸುಬ್ಬಾಶಾಸ್ತ್ರಿಗಳು |
| 1967 ರಿಂದ 1972ರವರೆಗೆ | => | ಶ್ರೀಯುತ ಸಿ.ಎಸ್.ನಾರಾಯಣರಾಯರು |
| 1972 ರಿಂದ 1983ರವರೆಗೆ | => | ಶ್ರೀಯುತ ಆರ್.ಎ. ಕೇಸರಿ |
| 1983 ರಿಂದ 1995ರವರೆಗೆ | => | ಶ್ರೀಯುತ ಸಿ.ಎಸ್.ನಾರಾಯಣರಾವ್ |
| 1995 ರಿಂದ 2000ರವರೆಗೆ | => | ಶ್ರೀಯುತ ಆರ್.ಅನಂತರಾಮು |
| 1996 ರಿಂದ 2000ರವರೆಗೆ | => | ಶ್ರೀಯುತ ಡಾ.ಎನ್.ಶ್ರೀರಾಮ್ |
| 2000 ರಿಂದ ಇಲ್ಲಿಯವರೆಗೆ | => | ಲಯನ್ ಎಸ್.ರಾಮಕೃಷ್ಣ |

## 1899 ರಿಂದ 2005ರವರೆಗೆ ಸಭೆಯ ಕಾರ್ಯದರ್ಶಿಗಳಾಗಿ ಕೆಲಸ ನಿರ್ವಹಿಸಿದವರ ಪಟ್ಟಿ

| | | | |
|---|---|---|---|
| 1899 ರಿಂದ 1924ರವರೆಗೆ | => | | ಶ್ರೀಯುತ ಅವತಿ ರಾಮಯ್ಯನವರ ನೇತೃತ್ವದಲ್ಲಿಯೇ ಎಲ್ಲಾ ಕೆಲಸ ಕಾರ್ಯಗಳು ನಡೆಯುತ್ತಿದ್ದು 1924ರಲ್ಲಿ ಕಾರ್ಯಕಾರಿ ಸಮಿತಿ ರಚಿಸಲಾಗಿದೆ. |
| 1924 ರಿಂದ 1933ರವರೆಗೆ | => | ೧. | ವಿ.ಎನ್.ಶ್ರೀಕಂಠಯ್ಯನವರು |
| | | ೨. | ಪೂರ್ಣಮೂರ್ತಿಗಳು |
| 1933 ರಿಂದ 1940ರವರೆಗೆ | => | ೧. | ಎನ್.ಭಾಸ್ಕರಪ್ಪನವರು |
| | | ೨. | ಸಿ.ಎಸ್.ನಾರಾಯಣರಾಯರು |
| 1940 ರಿಂದ 1955ರವರೆಗೆ | => | ೧. | ಎನ್.ಶ್ರೀಕಂಠಯ್ಯನವರು |
| | | ೨. | ಪೂರ್ಣಮೂರ್ತಿಗಳು |
| 1955 ರಿಂದ 1958ರವರೆಗೆ | => | | ಟಿ.ವೆಂಕಟಕೃಷ್ಣಯ್ಯನವರು |
| 1958 ರಿಂದ 1960ರವರೆಗೆ | => | | ಎನ್.ಆರ್.ರಂಗರಾವ್ |
| 1960 ರಿಂದ 1963ರವರೆಗೆ | => | | ಎಸ್.ವಿಶ್ವನಾಥರಾವ್ |
| 1963 ರಿಂದ 1967ರವರೆಗೆ | => | | ಎ.ಆರ್.ನಾಗರಾಜ್ |
| 1967 ರಿಂದ 1972ರವರೆಗೆ | => | | ಎನ್.ಆರ್.ರಂಗರಾವ್ |
| 1972 ರಿಂದ 1983ರವರೆಗೆ | => | ೧. | ಎ.ಆರ್.ನಾಗರಾಜಶರ್ಮ |
| | | ೨. | ಎನ್.ಆರ್.ರಂಗರಾವ್, ಸಹಕಾರ್ಯದರ್ಶಿ |
| 1983 ರಿಂದ 1993ರವರೆಗೆ | => | ೧. | ಎ.ಆರ್.ನಾಗರಾಜಶರ್ಮ |
| | | ೨. | ವಿ.ಎಸ್.ಶ್ರೀಕಂಠಶಾಸ್ತ್ರಿಗಳು. |
| 1993 ರಿಂದ 1994ರವರೆಗೆ | => | ೧. | ವಿ.ಎಸ್.ಶ್ರೀಕಂಠಶಾಸ್ತ್ರಿಗಳು. |
| | | ೨. | ಎಸ್.ವಿಶ್ವನಾಥರಾವ್ |
| 1994 ರಿಂದ 1996ರವರೆಗೆ | => | ೧. | ವಿ.ಎಸ್.ಶ್ರೀಕಂಠಶಾಸ್ತ್ರಿಗಳು. |
| | | ೨. | ಎ.ಎನ್. ಸೋಮಶೇಖರ್ |
| 1996 ರಿಂದ 2000ರವರೆಗೆ | => | ೧. | ಡಿ. ಎಸ್. ವಸಂತ್ ಮಾಧವ್ |
| | | ೨. | ಫಣೀಂದ್ರ |
| 2000 ರಿಂದ 2001ರವರೆಗೆ | => | ೧. | ಜಗದೀಶ್ |
| | | ೨. | ಎಸ್.ವಿಶ್ವನಾಥರಾವ್ |
| 2001 ರಿಂದ 2004ರವರೆಗೆ | => | ೧. | ಲಕ್ಷ್ಮಮ್ಮ |
| | | ೨. | ಎನ್.ಎಸ್. ರಾಮಸುಬ್ಬು |
| 2004 ರಿಂದ 2009ರವರೆಗೆ | => | | ಶ್ರೀ ಎನ್.ಎಸ್.ರಾಮಸುಬ್ಬು |
| ಈಗಿನ ಕಾರ್ಯದರ್ಶಿಗಳು | => | | ಫಣೀಂದ್ರ |

# ಶ್ರೀಮದ್ ರಾಮಾಯಣ ಮತ್ತು ಶರಣಾಗತಿ

ನ ಧರ್ಮ ನಿಶೋಸ್ಮಿ ನಾತಾತ್ಮವೇದಿ
ನ ಭಕ್ತಿಮಾನ್ ತ್ವತ್ ಚರಣಾರವಿಂದೇ ಅಕಿಂಚನೀಯ
ಅನನ್ಯಗತಿ ಶರಣ್ಯ ತ್ವತ್ಪಾದ ಮೂಲಂ ಶರಣಮಹಂ ಪ್ರಪದ್ಯೆ

ಶ್ರೀ ರಾಮಚಂದ್ರಸ್ವಾಮಿಯು ಮರ್ಯಾದ ಪುರುಷೋತ್ತಮನೆಂದು ಲೋಕಕ್ಕೆಲ್ಲಾ ಉಚ್ಛವಾದ ಆದರ್ಶವನ್ನು ತೋರಿಸಿಕೊಟ್ಟ ಯುಗ ಪುರುಷ. ಶ್ರೀರಾಮನನ್ನು ದೇವರೆಂದೋ, ಮನುಷ್ಯನೆಂದೋ, ಕ್ಷತ್ರಿಯನೆಂದೋ, ಮಗನೆಂದೋ, ಪ್ರಜೆಯೆಂದೋ, ಪತಿಯೆಂದೋ, ಮಿತ್ರನೆಂದೋ, ಶರಣಾಗತವತ್ಸಲನೆಂದೋ ಹೇಗೆ ಭಾವಿಸಿದರೂ ಸಹಾ ಶ್ರೀರಾಮ ಆದರ್ಶ ಪುರುಷನೆ.

ಶ್ರೀಮದ್ ರಾಮಾಯಣದಲ್ಲಿ ಶರಣಾಗತಿಯ ವಿಚಾರವಾಗಿ ಅನೇಕ ಕಡೆ ಉಲ್ಲೇಖಗಳಿದ್ದರೂ ಅತಿ ಪ್ರಮುಖವಾದುದೆಂದರೆ, ಕಾಗೆಯ ರೂಪದಲ್ಲಿದ್ದ ಇಂದ್ರಪುತ್ರನ ಶರಣಾಗತಿ, ಸುಗ್ರೀವ ಶರಣಾಗತಿ, ವಿಭೀಷಣ ಶರಣಾಗತಿ ಮತ್ತು ಸಮುದ್ರರಾಜನ ಶರಣಾಗತಿ.

ಶ್ರೀ ರಾಮಚಂದ್ರ ಪ್ರಭು ಧರ್ಮಾತ್ಮ, ಸಚ್ಛಾರೀತ್ರವುಳ್ಳವ ಹಾಗೂ ಲೋಕ ವ್ಯವಹಾರಾಸಕ್ತ. ಸಾಮಾನ್ಯವಾಗಿ ಧರ್ಮ ಮತ್ತು ಲೋಕ ವ್ಯವಹಾರ ಇವೆರಡರಲ್ಲಿಯೂ ಇರಬೇಕೆಂದರೆ ಆತನು ನಿರ್ಲಿಪ್ತಾವಸ್ಥೆಯಲ್ಲಿರಬೇಕು. ಅಂದರೆ ಎರಡೂ ಕ್ಷೇತ್ರಗಳಲ್ಲಿ ಇದ್ದು ಅಂಟಿಕೊಂಡರೂ ಅಂಟಿಕೊಳ್ಳದಂತೆ ಇರಬೇಕು. ಅಂತಹ ಪುರುಷನಿಗೆ ದಕ್ಷತೆ ಇರಬೇಕೇ ಹೊರತು ಯಾವ ಅಪೇಕ್ಷೆಯೂ ಇರಬಾರದು. ಆಗ ಮಾತ್ರ ಸಚ್ಛಾರಿತ್ರಪುರುಷನಾಗಿ ರೂಪುಗೊಳ್ಳಲು ಸಾಧ್ಯ. ಈ ಮೇಲ್ಕಂಡ ಮೂರು ಗುಣಗಳು ಅಂದರೆ ಸಚ್ಛಾರಿತ್ರ, ಧರ್ಮಪಾಲನೆ ಜೊತೆಗೆ ಲೋಕವ್ಯವಹಾರವನ್ನು ಯಶಸ್ವಿಯಾಗಿ ನಿರ್ವಹಿಸಿದ ಶ್ರೀರಾಮಚಂದ್ರಪ್ರಭು ನಮ್ಮೆಲ್ಲರಿಗೂ ಆದರ್ಶ ಪುರುಷ ಇದರಲ್ಲಿ ಎರಡು ಮಾತಿಲ್ಲ. ಇಂತಹ ಶ್ರೀ ರಾಮಚಂದ್ರಸ್ವಾಮಿ ಶರಣಾಗತರಾದವರಿಗೆ ಆತನು ತನ್ನ ಶತ್ರುವೇ ಆಗಿದ್ದರೂ ರಕ್ಷಣೆಯನ್ನು ಕೊಡುತ್ತಿದ್ದ ಇದು ಶ್ರೀ ರಾಮಚಂದ್ರನಲ್ಲಿದ್ದ ಮತ್ತೊಂದು ವಿಶೇಷಗುಣ.

ಒಮ್ಮೆ ಸೀತಾದೇವಿಯ ಮಡಿಲಲ್ಲಿ ಸುಖದಿಂದ ನಿದ್ರಿಸುತ್ತಿದ್ದ ಶ್ರೀ ರಾಮಚಂದ್ರ ಪ್ರಭು, ಈ ಸಮಯದಲ್ಲಿ ಇಂದ್ರಪುತ್ರನು ಕಾಗೆಯ ರೂಪದಲ್ಲಿ ಬಂದು ಸೀತೆಯ ಸೌಂದರ್ಯಕ್ಕೆ ಮಾರುಹೋಗಿ ಆಕೆಯ ಶರೀರದಲ್ಲಿ ತನ್ನ ಕೊಕ್ಕಿನಿಂದ ಗಾಯವನ್ನುಂಟು ಮಾಡಿದ. ಗಾಯವುಂಟಾದ್ದರಿಂದ ರಕ್ತವು ತೊಟ್ಟಿಕ್ಕಿ ಪ್ರಭುವಿನ ಮೇಲೆ ಬಿದ್ದು ಪ್ರಭುವಿಗೆ ನಿದ್ರಾಭಂಗವಾಯಿತು. ಎದ್ದು ನೋಡಲು ಸೀತಾದೇವಿಗೆ ಪೀಡೆಯುಂಟಾಗಿರುವುದು ಹಾಗೂ ಅದಕ್ಕೆ ಕಾರಣ ಎದುರಿಗಿದ್ದ ಕಾಕರಾಜ ಎಂಬುದು ಶ್ರುತಪಟ್ಟ ತಕ್ಷಣ ಶ್ರೀ ರಾಮಚಂದ್ರನು ಅಲ್ಲಿಯೇ ಇದ್ದ ದರ್ಭೆಯನ್ನು ಬ್ರಹ್ಮಾಸ್ತ್ರವನ್ನಾಗಿ ಮಾಡಿ ಪ್ರಯೋಗಿಸಲು, ಕಾಗೆಯು ಮೂರು ಲೋಕಗಳನ್ನು ಸುತ್ತಿ ರಕ್ಷಕರಿಲ್ಲದೆ ಶ್ರೀ ರಾಮಚಂದ್ರನ ಪಾದದ ಬಳಿ ಬಂದು ಬಿತ್ತು. ಹೀಗೆ ಅನ್ಯಮಾರ್ಗವಿಲ್ಲದೆ ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಶರಣಾದ ಕಾಗೆಗೆ, ಕರುಣಾಪೂರಿತ ದೃಷ್ಟಿಯಿಂದ ನೋಡಿದ ಶ್ರೀ ರಾಮ ಕಾಗೆಯನ್ನು ರಕ್ಷಿಸಲು ನಿರ್ಧರಿಸಿ ಅದರ ಕಣ್ಣೊಂದನ್ನು ಮಾತ್ರ ತನ್ನ ಬ್ರಹ್ಮಾಸ್ತ್ರಕ್ಕೆ ಆಹುತಿಯಾಗುವಂತೆ ಮಾಡಿದ.

ಸುಗ್ರೀವನ ವಿಷಯದಲ್ಲಿ, ತಾನು ಮಾತುಕೊಟ್ಟಂತೆ ವಾಲಿಯನ್ನು ಸಂಹಾರ ಮಾಡಿದ ಶ್ರೀರಾಮ. ಆಗ ಮಳೆಗಾಲವಾದ್ದರಿಂದ ಮಳೆಗಾಲ ಮುಗಿದ ನಂತರ ಸೀತಾನ್ವೇಷಣೆ ಮಾಡುವುದಾಗಿ ಮಾತುಕೊಟ್ಟ ಸುಗ್ರೀವ ಭೋಗವಿಲಾಸದಲ್ಲಿ ಮೈ ಮರೆತು ಎರಡು ತಿಂಗಳು ಕಳೆದರೂ ತಾನು ಪ್ರಭುವಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲಾರದೆ ಹೋದಾಗ ದಯಾಮೂರ್ತಿಯಾದ ಶ್ರೀರಾಮ ಲಕ್ಷ್ಮಣನ ಮೂಲಕ ಕೊಟ್ಟಮಾತನ್ನು ನಡೆಸಲು ಸುಗ್ರೀವನಿಗೆ ಎಚ್ಚರಿಕೆಯನ್ನು ನೀಡಿದ. ಜಾಗ್ರತನಾದ ಸುಗ್ರೀವ ತಾನು ಮಾಡಿದ ಅಪರಾಧಕ್ಕೆ ಶ್ರೀ ರಾಮಚಂದ್ರನ ಪಾದದಲ್ಲಿ ಬಿದ್ದು ಕ್ಷಮೆ ಯಾಚಿಸಿದ.

ಹೀಗೆ ಶರಣಾದ ಸುಗ್ರೀವನಿಗೆ ಶ್ರೀ ರಾಮಚಂದ್ರ ಪ್ರಭು ಆತನು ನಿರ್ವಹಿಸಬೇಕಾದ ಕರ್ತವ್ಯದ ಬಗ್ಗೆ ಎಚ್ಚರವಾಗುವಂತೆ ಮಾಡಿದ.

ವಿಭೀಷಣನೂ ಸಹ ತನ್ನ ವಿನಯ ಹಾಗೂ ರಾಜನೀತಿಯ ನಿಪುಣತೆಯನ್ನು ಪ್ರದರ್ಶನ ಮಾಡಿ ಪರಮಭಾಗವತರಾದಂತಹ ಜಾಂಬುವಂತ, ಸುಗ್ರೀವಾದಿಗಳನ್ನು ಮುಂದೆ ಇಟ್ಟುಕೊಂಡು ಭಗವಂತನಲ್ಲಿ ತನ್ನ ಶರಣಾಗತಿಯ ಬಗ್ಗೆ ವಿಜ್ಞಾಪಿಸಬೇಕೆಂದು ಪ್ರಾರ್ಥಿಸುತ್ತಾನೆ. ಆಗ ಶ್ರೀ ರಾಮಚಂದ್ರ ಪ್ರಭು ಸುಗ್ರೀವಾದಿಗಳ ಅಪ್ಪಣೆಯನ್ನು ಪಡೆದು, ವಿಭೀಷಣನು ಸದಾಚಾರ ಸಂಪನ್ನ, ಆತನು ಶರಣೆಂದು ಬಂದಾಗಲೇ ನಾನು ಅಭಯ ಕೊಟ್ಟಾಯಿತು. ಶರಣಾಗತಿಯ ತತ್ವಾರ್ಥ ನಿಮ್ಮೆಲ್ಲರಿಗೂ ಶ್ರುತಪಡಿಸಲೋಸುಗವಾಗಿ ಇಷ್ಟು ವಿಳಂಬಮಾಡಿದೆ. ತಕ್ಷಣ ವಿಭೀಷಣನನ್ನು ಕರೆದು ತರಬೇಕೆಂದು ಆಜ್ಞಾಪಿಸಿದ. ವಿಭೀಷಣ ಬಂದಾಕ್ಷಣವೇ ಆತನನ್ನು ಮೃದು ಮಧುರವಾದಿ ಮಾತುಗಳಿಂದ ಸಂತೈಸಿದ ಶ್ರೀ ರಾಮ ಅಷ್ಟಕ್ಕೆ ತೃಪ್ತನಾಗದೇ ಆತನಿಗೆ ಲಂಕಾರಾಜನನ್ನಾಗಿ ಮುಂಚಿತವಾಗಿಯೇ ಅಭಿಷೇಕಿಸಿ ಬಿಡುತ್ತಾನೆ. ಇದು ಭಗವಂತನು ತನ್ನಲ್ಲಿ ಶರಣಾದವರಿಗೆ ತಾನು ಏನನ್ನು ಬೇಕಾದರೂ ಕೊಡಬಲ್ಲೆ ತಾನು ಶರಣಾಗತ ವತ್ಸಲ ಎಂಬುದನ್ನು ನಮ್ಮೆಲ್ಲರಿಗೂ ಪರಿಚಯ ಮಾಡಿಕೊಡುತ್ತಾನೆ.

ಸೀತಾದೇವಿಯನ್ನು ಲಂಕಾದಿಪತಿಯಾದ ರಾವಣನ ಹಿಡಿತದಿಂದ ಬಿಡಿಸಲು, ಏಳು ಸಮುದ್ರಗಳನ್ನು ದಾಟಬೇಕಾದ ಪರಿಸ್ಥಿತಿ ಬಂದೊದಗಿದಾಗ, ವಿಭೀಷಣ, ಸುಗ್ರೀವಾದಿಗಳ ಜೊತೆ ಚರ್ಚಿಸಿದ ನಂತರ ಶ್ರೀ ರಾಮ ಸಮುದ್ರ ರಾಜನನ್ನು ಪ್ರಸನ್ನೀಕರಿಸಿಕೊಳ್ಳಲು ಮೂರು ದಿನಗಳ ಕಾಲ ದರ್ಭಶಯನನಾಗಿ ಸಮುದ್ರ ತೀರದಲ್ಲಿ ಪವಡಿಸಿದ. ಪರಮಾತ್ಮನ ನಮ್ರತೆಯನ್ನು ಲಘುವಾಗಿ ಪರಿಗಣಿಸಿದ ಸಮುದ್ರರಾಜ ಪ್ರಸನ್ನನಾಗದೇ ಹೋದಾಗ, ನಾನು ಇಷ್ಟು ವಿನಂತಿಸಿಕೊಂಡರೂ ಮದಾಂಧನಾಗಿ ವರ್ತಿಸುತ್ತಿರುವ ಈ ಸಮುದ್ರರಾಜನನ್ನು ಶಿಕ್ಷಿಸಿ, ಸಮುದ್ರದ ಜಲವನ್ನೆಲ್ಲಾ ಶೋಷಿಸಿ ಬಿಡಲು ನಿಶ್ಚರಿಯಿಸಿ ಬಿಲ್ಲನ್ನು ಎದೆಗೇರಿಸಿ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಲು ಪ್ರಭು ಸಿದ್ಧನಾದ. ಪ್ರಭುವಿನ ಕೋಪಾವಿಷ್ಟವನ್ನು ನೋಡಿದ ಸಮುದ್ರಾಜ ತಾನು ಎಂತಹ ತಪ್ಪನ್ನು ಮಾಡಿದೆ ಎಂದು ಭಯಬೀತಿಯಿಂದ ಓಡೋಡಿ ಬಂದು ಪ್ರಭುವಿನ ಚರಣದಲ್ಲಿ ಬಿದ್ದು ನನ್ನದು ಮಹಾಪರಾದವಾಯಿತು, ನಿನ್ನ ಕಾರ್ಯಕ್ಕೆ ನಾನು ಅಡ್ಡಿ ಮಾಡುವುದುಂಟೇ, ಖಂಡಿತವಾಗಿಯೂ ನನ್ನ ಮೇಲೆ ಸೇತುವೆ ನಿರ್ಮಾಣ ಮಾಡಿ ತಾವು ಲಂಕೆಗೆ ಬಿಜಯ ಮಾಡಿಸಬಹುದು ಎಂದು ಪ್ರಾರ್ಥಿಸಿದ. ಶರಣಾಗಿರುವ ಸಮುದ್ರರಾಜನನ್ನು ಕೃಪಾದೃಷ್ಟಿಯಿಂದ ನೋಡಿದ ಶ್ರೀ ರಾಮ ತನ್ನ ಬ್ರಹ್ಮಾಸ್ತ್ರಕ್ಕೆ ಆಹಾರಬೇಕೇ ಬೇಕು, ಎಂದಾಗ, ಸಮುದ್ರರಾಜನು ದ್ರುಮ್ಯಕುಲ್ಯವೆಂಬ ಸ್ಥಾನದಲ್ಲಿ ಕೆಲವರು ದುಷ್ಟರು ತನಗೆ ತೊಂದರೆ ಕೊಡುತ್ತಿದ್ದಾರೆ ಎಂದು ತಿಳಿಸಿದಾಗ, ಶ್ರೀ ರಾಮನೂ ಸಹಾ ಸಮುದ್ರರಾಜನು ತೋರಿದ ದಿಕ್ಕಿಗೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಲು ಶತ್ರುಗಳು ನಿರ್ನಾಮವಾದರು.

ಹೀಗೆ ಶ್ರೀಮದ್‌ರಾಮಾಯಣವು ಶರಣಾಗತಿಯ ಉತ್ಕೃಷ್ಟತೆಯನ್ನು ಮೇಲಿಂದ ಮೇಲೆ ನಮಗೆ ಶ್ರುತಪಡಿಸುತ್ತದೆ. ಶರಣಾರ್ಥಿಯು ತನ್ನ ಇಷ್ಟಾರ್ಥವನ್ನು ಸಾಧಿಸಿಕೊಳ್ಳಲು ಅನ್ಯಮಾರ್ಗವಿಲ್ಲದೆ, ಸಹಾಯಕರೂ ಯಾರೂ ಇಲ್ಲದೇ ಹೋದಾಗ ದೃಢಮನಸ್ಸಿನಿಂದ ಭಗವಂತನಲ್ಲಿ ಶರಣಾದಲ್ಲಿ ಆತನ ಸಮಸ್ತ ಇಷ್ಟಾರ್ಥಗಳು ಕೈಗೂಡುವುದರಲ್ಲಿ ಸಂದೇಹವೇ ಇಲ್ಲ ಎಂದು ಶ್ರೀಮದ್ರಾಮಾಯಣವು ಶರಣಾಗತಿಯ ಬಗ್ಗೆ ನಮಗೆ ಪರಿಚಯ ಮಾಡಿಕೊಡುತ್ತದೆ. ಇಂತಹ ಪುರುಷೋತ್ತಮನಾದ ಶ್ರೀರಾಮನಲ್ಲಿ ನಾವೂ ಶರಣಾಗಿ ಸ್ವಾಮಿಯ ಕೃಪೆಗೆ ಪಾತ್ರರಾಗೋಣ.

॥ ಜೈ ಶ್ರೀರಾಮ್ ॥

ವಾಸುಕೀಶಾಯಿ ಹೆಚ್.ಎಲ್.